# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮೇ 14, 2021

ಸಂಪುಟ : 47 ಸಂಚಿಕೆ : 361 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ವಾರದಲ್ಲಿ 4 ದಿನ ಸಂಪೂರ್ಣ ಸ್ತಬ್ಧ

ದಾವಣಗೆರೆ, ಮೇ 13 - ಕೊರೊನಾ ಸೋಂಕಿನ ಎರಡನೇ ಅಲೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಹಾಗೂ ಸೋಂಕು ಹರಡುವಿಕೆಯ ಸರಪಳಿಯನ್ನು ತುಂಡರಿಸಲು ಜಿಲ್ಲೆಯಲ್ಲಿ ವಾರದ 4 ದಿನ 'ಸಂಪೂರ್ಣ ಲಾಕ್‌ಡೌನ್' ಮಾಡುವ ಶಿವಮೊಗ್ಗ ಮಾದರಿಯ ಕ್ರಮಕ್ಕೆ ಜಿಲ್ಲಾಡಳಿತ ಕ್ರಮ ತೆಗೆದುಕೊಳ್ಳಲಿದೆ.

**ಲಾಕ್‌ಡೌನ್ ಮೀರಿದ ಬಿಗಿ ಕ್ರಮಕ್ಕೆ ಸಿದ್ಧತೆ**

ಕೊರೊನಾ ನಿಯಂತ್ರಣ ಕುರಿತ ಸಭೆಯಲ್ಲಿ ಈ ಬಗ್ಗೆ ಸೂಚನೆ ನೀಡಿರುವ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಮೂರು ದಿನ ಸಾಮಾನ್ಯ ಲಾಕ್‌ಡೌನ್ ಹಾಗೂ ನಾಲ್ಕು ದಿನ ಸಂಪೂರ್ಣ ಲಾಕ್‌ಡೌನ್ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಸೂಚನೆ ನೀಡಿದರು.

ನಾಲ್ಕು ದಿನಗಳ ಲಾಕ್‌ಡೌನ್ ಕ್ರಮದ ಕುರಿತು ಶಾಸಕರು ಹಾಗೂ ಜನಪ್ರತಿನಿಧಿಗಳ ಜೊತೆ ಚರ್ಚಿಸಿ ನಿರ್ಧಾರ **(5ನೇ ಪುಟಕ್ಕೆ)**

## ಲಸಿಕೆ ಕೊರತೆಗೆ ಹೈಕೋರ್ಟ್ ತರಾಟೆ

### ಎರಡು ದಿನಗಳಲ್ಲಿ ಎರಡನೇ ಡೋಸ್‌ಗೆ ತಾಕೀತು

ಬೆಂಗಳೂರು, ಮೇ 13 - ಕೊರೊನಾ ವಿಚಾರದಲ್ಲಿ ರಾಜ್ಯ ಹೈಕೋರ್ಟ್ ಮತ್ತೊಮ್ಮೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಬಿಸಿ ಮುಟ್ಟಿಸಿದೆ.

ಅಗತ್ಯ ಪ್ರಮಾಣದ ಲಸಿಕೆ ದಾಸ್ತಾನು ಇಲ್ಲದಿದ್ದರೂ, ಲಸಿಕೆ ಅಭಿಯಾನ ಆರಂಭಿಸಿದ ಸರ್ಕಾರದ ಔಚಿತ್ಯವನ್ನು ಪ್ರಶ್ನಿಸಿದೆ.

ಲಸಿಕೆ ಕೊರತೆಯಿಂದಾಗಿ 45 ವರ್ಷ ಮೇಲ್ಪಟ್ಟ ವರಿಗೆ ಎರಡನೇ ಹಂತದ ಲಸಿಕೆ ನೀಡದಿರುವುದಕ್ಕೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ಮುಖ್ಯನ್ಯಾಯಮೂರ್ತಿ ಅಭಯ್ ಎಸ್. ಓಕ ನೇತೃತ್ವದ ವಿಭಾಗೀಯ ಪೀಠ ಲಸಿಕೆ ಕೊರತೆಗೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತವಾಗಿ ವಿಚಾರಣೆಯನ್ನು ಕೈಗೆತ್ತಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಪ್ರಶ್ನಾವಳಿಯನ್ನೇ ಮುಂದಿಟ್ಟಿತು.

ಈಗಾಗಲೇ ಮೊದಲ ಹಂತದ ಲಸಿಕೆ ಪಡೆದವರು ಎರಡನೇ ಡೋಸ್ ಪಡೆಯಲು ಕಾದು ಕುಳಿತಿದ್ದಾರೆ. ಲಸಿಕೆ ಒದಗಿಸಲು ನಿಮ್ಮಿಂದಾಗದಿದ್ದರೆ ಹೇಳಿ. ರಾಜ್ಯದಲ್ಲಿ 6 ಕೋಟಿಗೂ ಹೆಚ್ಚು ಜನಸಂಖ್ಯೆ ಇದೆ. ಅವರಲ್ಲಿ ಸರ್ಕಾರ ಶೇ.1ರಷ್ಟು ಮಂದಿಗೂ ಲಸಿಕೆ ಹಾಕಿಲ್ಲ. ಕನಿಷ್ಠ ಎರಡನೇ ಡೋಸ್‌ಗಾಗಿ ಕಾದು ಕುಳಿತವರಿಗಾದರೂ ಎರಡು ದಿನದಲ್ಲಿ ಲಸಿಕೆ ಒದಗಿಸಿ ಎಂದು ತಾಕೀತು ಮಾಡಿದೆ.

ಒಂದನೇ ಡೋಸ್ ತೆಗೆದುಕೊಂಡ ಮೇಲೆ 2ನೇ ಡೋಸ್ ತೆಗೆದುಕೊಳ್ಳುವುದು ಜನರ ಹಕ್ಕಲ್ಲವೇ? ರಾಜ್ಯದಲ್ಲಿ 26 ಲಕ್ಷ ಜನರಿಗೆ ವ್ಯಾಕ್ಸಿನ್ ಕೊರತೆಯಿದೆ. ಈ ಕೊರತೆಯನ್ನು ಹೇಗೆ ಸರಿಪಡಿಸುತ್ತೀರಿ. ನಿಗದಿತ ಸಮಯದಲ್ಲಿ ಎರಡನೇ ಡೋಸ್ ಹಾಕಿಸಿಕೊಳ್ಳದಿದ್ದರೆ ಮೊದಲನೇ ಡೋಸ್ ವ್ಯರ್ಥವಾಗುವುದಿಲ್ಲವೇ? ಎಂದು ಪ್ರಶ್ನಿಸಿದ್ದು, ಈಗ ಎಷ್ಟು ಉತ್ಪಾದನೆಯಾಗುತ್ತಿದೆ, ಕರ್ನಾಟಕಕ್ಕೆ ಎಷ್ಟು ಹಂಚಿಕೆ ಮತ್ತು ಪೂರೈಕೆಯಾಗಿದೆ ಎಂದು ವರದಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ. **(5ನೇ ಪುಟಕ್ಕೆ)**

## ಶಾಮನೂರು ತಿಪ್ಪೇಗುಂಡಿ ಎಸ್.ಟಿ. ಜ್ಯೋತಿಪ್ರಕಾಶ್ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ, 7ನೇ ಕ್ರಾಸ್ ವಾಸಿ

**ತಿಪ್ಪೇಗುಂಡಿ ದಿ. ಶ್ರೀಮತಿ ಗೌರಮ್ಮ ಮತ್ತು ದಿ. ರಾಮಪ್ಪನವರ ಮೊಮ್ಮಗ**

**ಎಸ್.ಟಿ. ಜ್ಯೋತಿಪ್ರಕಾಶ್**

ಅವರು ದಿನಾಂಕ 13.5.2021ರ ಗುರುವಾರ ಸಂಜೆ 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 52 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.5.2021ರ ಗುರುವಾರ ರಾತ್ರಿ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ

**ತಾಯಿ : ಶ್ರೀಮತಿ ಹನುಮಂತಮ್ಮ**
**ಪತ್ನಿ : ಶ್ರೀಮತಿ ನೀಲಮಣಿ**
**ಮಕ್ಕಳು : ಕು. ಚಂದನ, ಕು. ಸಂಪ್ರೀತ**

**ಶಾಮನೂರು ತಿಪ್ಪೇಗುಂಡಿ ವಂಶಸ್ಥರು**

## ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಂದೂಡಿಕೆ

ಬೆಂಗಳೂರು, ಮೇ 13 - ಜೂನ್ 21 ರಿಂದ ಪ್ರಾರಂಭವಾಗಬೇಕಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ ಎಂದು ಸಚಿವ ಸುರೇಶ್ ಕುಮಾರ್ ಪ್ರಕಟಿಸಿದ್ದಾರೆ.

ಹೆಚ್ಚುತ್ತಿರುವ ಕೊರೊನಾ ಪ್ರಕರಣಗಳು, ವಿದ್ಯಾರ್ಥಿ-ಪೋಷಕರ, ವಿವಿಧ ಶಾಲಾ ಸಂಘಟನೆಗಳ ಆತಂಕಗಳನ್ನು ಗಮನದಲ್ಲಿರಿಸಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ. ಕೊರೊನಾ **(4ನೇ ಪುಟಕ್ಕೆ)**

## ಇಂದಿನಿಂದ 2ನೇ ಡೋಸ್ ಲಸಿಕೆ

ದಾವಣಗೆರೆ, ಮೇ 13- ಕೋವಿಡ್ 2ನೇ ಡೋಸ್ ಲಸಿಕೆಯನ್ನು ಮೇ 14 ರಿಂದ ನೀಡಲಾಗುವುದು. ಕೋವಿಶೀಲ್ಡ್‌ನ 2ನೇ ಡೋಸ್ **(2ನೇ ಪುಟಕ್ಕೆ)**


**ಹಾರ್ದಿಕ ಶುಭಾಶಯಗಳು**







**ಪವಿತ್ರ ರಂಜಾನ್ ಮತ್ತು ಬಸವ ಜಯಂತಿ**
ಹಬ್ಬಗಳ ಈ ಶುಭ ಸಂದರ್ಭದಲ್ಲಿ ಸಮಸ್ತರಿಗೆ ಹಾರ್ದಿಕ ಶುಭಾಶಯಗಳು.



**ಅಯೂಬ್ ಪೈಲ್ವಾನ್**
ಅಧ್ಯಕ್ಷರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸಮಿತಿ, ಮಾಜಿ ಅಧ್ಯಕ್ಷರು, ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ.



**ಜಮೀನು ಮಾರಾಟಕ್ಕಿದೆ**

ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮಿಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.

ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409


## ತರಳಬಾಳು ಹಾಸ್ಟೆಲ್ ಈಗ ಕೋವಿಡ್ ಕಾಳಜಿ ಕೇಂದ್ರ

ದಾವಣಗೆರೆ, ಮೇ 13- ನಗರದ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಂತಿರುವ ಹದಡಿ ರಸ್ತೆಯ ಶ್ರೀ ತರಳಬಾಳು ಜಗದ್ಗುರು ಮಹಿಳಾ ವಿದ್ಯಾರ್ಥಿ ನಿಲಯವನ್ನು ಕೋವಿಡ್ ಕಾಳಜಿ ಕೇಂದ್ರವಾಗಿ ಪರಿವರ್ತಿಸಲಾಗಿದೆ.

15 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ವಿದ್ಯಾರ್ಥಿ ನಿಲಯವನ್ನು ತಾತ್ಕಾಲಿಕವಾಗಿ ಕೋವಿಡ್ ಕೇರ್ ಸೆಂಟರ್ ಆಗಿ ಪರಿವರ್ತಿಸಲು ತರಳಬಾಳು ಜಗದ್ಗುರು ಶ್ರೀ **(4ನೇ ಪುಟಕ್ಕೆ)**

## ದೊಡ್ಡಬಾತಿ ಗ್ರಾಮದ ತಳವಾರ ಕೆಂಚಮ್ಮ ನಿಧನ

ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕು
ದೊಡ್ಡಬಾತಿ ಗ್ರಾಮದ
ದಿ|| ಶ್ರೀ ತಳವಾರ ನಾಗಪ್ಪನವರ ಧರ್ಮಪತ್ನಿ
**ಶ್ರೀಮತಿ ಟಿ. ಕೆಂಚಮ್ಮ** ಅವರು
ದಿನಾಂಕ 13.05.2021ರ ಗುರುವಾರ ಮಧ್ಯಾಹ್ನ 3 ಘಂಟೆಗೆ
ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 76 ವರ್ಷ ವಯಸ್ಸಾಗಿತ್ತು.
ಮೃತರು ಐದು ಜನ ಪುತ್ರರು ಮತ್ತು ನಾಲ್ಕು ಜನ ಪುತ್ರಿಯರು,
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ
ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ.
ಕೆಂಚಮ್ಮ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು
ದಿನಾಂಕ 14.05.2021ರ ಶುಕ್ರವಾರ ಬೆಳಗ್ಗೆ 10-30 ಘಂಟೆಗೆ
ದೊಡ್ಡಬಾತಿಯ ನೀಲಾನಹಳ್ಳಿ ರಸ್ತೆಯಲ್ಲಿರುವ
ದಿ|| ಟಿ. ನಾಗಪ್ಪ ಅವರ ಅದಿತಿ ಫಾರಂ ಹೌಸ್‌ನಲ್ಲಿ
ನೆರವೇರಿಸಲಾಗುವುದು.



ಇಂತಿ ದುಃಖತಪ್ತರು,

- ✦ **ಶ್ರೀಮತಿ ಇಂದಿರಾ ರಾಮಚಂದ್ರ ಮತ್ತು ಎಸ್. ವಿ. ರಾಮಚಂದ್ರರವರು,** ಶಾಸಕರು, ಜಗಳೂರು ವಿಧಾನ ಸಭಾ ಕ್ಷೇತ್ರ ಅಧ್ಯಕ್ಷರು, ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
- ✦ **ಶ್ರೀ ಟಿ. ಎನ್. ರಾಜಶೇಖರ್ (ಬಾತಿ ರಾಜು) ಮತ್ತು ಸಹೋದರರು, ಸಹೋದರಿಯರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗದವರು.** ಮೊ. : 97410 80308

## ಬಸವ ಜಯಂತಿಯನ್ನು ಮನೆಗಳಲ್ಲೇ ಆಚರಿಸಿ : ಶ್ರೀ ವಚನಾನಂದ ಸ್ವಾಮೀಜಿ ಕರೆ



ಮಲೇಬೆನ್ನೂರು, ಮೇ 13- ಹನ್ನೆರಡನೇ ಶತಮಾನದ ಕ್ರಾಂತಿ ಸೂರ್ಯ ಜಗಜ್ಯೋತಿ ಬಸವಣ್ಣನವರು ಸರ್ವರನ್ನೂ ಸಮಾನವಾಗಿ ಕಾಣುವ ಮೂಲಕ ಜಗತ್ತಿಗೆ ಸಮಾನತೆಯ ಮಂತ್ರವನ್ನು ತೋರಿದ ಮಹಾಪುರುಷರಾಗಿದ್ದು, ಇದೇ ದಿನಾಂಕ 14 ರಂದು ಅವರ ಜಯಂತಿಯನ್ನು ಭಕ್ತರು ತಮ್ಮ ಮನೆಗಳಲ್ಲಿ ಸರಳವಾಗಿ ಹಬ್ಬದಂತೆ ಆಚರಿಸಿ ಎಂದು ಪಂಚಮಸಾಲಿ ಜಗದ್ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ ಕರೆ ನೀಡಿದ್ದಾರೆ.

ಕೋವಿಡ್ ಮಹಾಮಾರಿ ವ್ಯಾಪಿಸಿ ಬದುಕು ಆತಂಕದಿಂದ ಕೂಡಿರುವ ಈ ದಿನಗಳಲ್ಲಿ ಬಸವ ಜಯಂತಿ ಆಚರಣೆಗೆ ನೀವೇ ಒಂದಿಷ್ಟು ನಿರ್ಬಂಧ ಹಾಕಿಕೊಳ್ಳಿ. ಯೋಗ, ಧ್ಯಾನವನ್ನು ತಪ್ಪದೇ ಮಾಡಿ, ಮನಸ್ಸಂತೋಷ ಕಾಯ್ದುಕೊಳ್ಳಿ ಎಂದು ಶ್ರೀ ವಚನಾನಂದ ಸ್ವಾಮೀಜಿ ತಿಳಿಸಿದ್ದಾರೆ.

## ಅಂದನೂರು ಸುವರ್ಣಮ್ಮ ನಿಧನ



ದಾವಣಗೆರೆ ವಿನೋಬನಗರ ಪೊಲೀಸ್ ಕ್ವಾಟ್ರಸ್ ಹತ್ತಿರದ ವಾಸಿ
**ಶ್ರೀಮತಿ ಅಂದನೂರು ಸುವರ್ಣಮ್ಮ**
ಅವರು ದಿನಾಂಕ 13.5.2021ರ ಗುರುವಾರ ಸಂಜೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 58 ವರ್ಷ ವಯಸ್ಸಾಗಿತ್ತು. ಸುವರ್ಣಮ್ಮ, ಜವಳಿ ವರ್ತಕರಾದ ಅಂದನೂರು ನಿರಂಜನ ಮುರುಗೇಂದ್ರ ಅವರ ಧರ್ಮಪತ್ನಿ ಹಾಗೂ ದಿ. ಅಂದನೂರು ಮಹಾಲಿಂಗಪ್ಪ ಅವರ ದ್ವಿತೀಯ ಸೊಸೆ. ಪತಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.5.2021ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
**ಕೊಟ್ಟೂರೇಶ್ವರ ಟೆಕ್ಸ್ ಟೈಲ್ಸ್,** ಕಾಯಿಪೇಟೆ, ದಾವಣಗೆರೆ.

# ಸಮಯ ಪ್ರಜ್ಞೆಯಿಂದ ಅನಾಹುತ ತಪ್ಪಿಸಿದ ಶಾಸಕ ರೇಣುಕಾಚಾರ್ಯ

### 20 ಕೊರೊನಾ ರೋಗಿಗಳು ಸಂಕಷ್ಟದಿಂದ ಪಾರು



ಹೊನ್ನಾಳಿ, ಮೇ 13 - ತಾಲ್ಲೂಕು ಆಸ್ಪತ್ರೆಗೆ ಆಕ್ಸಿಜನ್ ಕೊರತೆ ಹಿನ್ನೆಲೆಯಲ್ಲಿ ತಡ ರಾತ್ರಿ ಭೇಟಿ ನೀಡಿದ ಶಾಸಕ ಎಂ.ಪಿ.ರೇಣುಕಾಚಾರ್ಯ ಆಕ್ಸಿಜನ್ ಪೂರೈಕೆ ಮಾಡಿ 20 ಜನರ ಜೀವವನ್ನು ಸಂಕಷ್ಟದಿಂದ ಪಾರು ಮಾಡಿದ ಘಟನೆ ಬುಧವಾರ ನಡೆದಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ 20 ಜನ ಕೊರೊನಾ ಸೋಂಕಿತರು ಆಕ್ಸಿಜನ್ ಬೆಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಕೇವಲ 3 ಗಂಟೆಗಾಗುವಷ್ಟು ಮಾತ್ರವೇ ಆಕ್ಸಿಜನ್ ಇದ್ದು, ಸಿಲಿಂಡರ್ ಖಾಲಿಯಾದರೆ ಸೋಂಕಿತರ ಜೀವಕ್ಕೆ ಮಾರಕವಾಗುತ್ತದೆ ಎಂದು ರಾತ್ರಿ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಚಂದ್ರಪ್ಪ ಅವರು ಶಾಸಕರಿಗೆ ದೂರವಾಣಿ ಕರೆ ಮಾಡಿ ಮಾಹಿತಿ ನೀಡಿದ್ದರು.

ಇದಕ್ಕೆ ಸ್ಪಂದಿಸಿದ ಶಾಸಕರು ಆಸ್ಪತ್ರೆಗೆ ಧಾವಿಸಿ ಪಿಪಿಇ ಕಿಟ್ ಧರಿಸಿ ಸೋಂಕಿತರ ವಾರ್ಡ್‌ಗೆ ಭೇಟಿ ನೀಡಿ, ಪರಿಸ್ಥಿತಿಯ ಗಂಭೀರತೆಯನ್ನು ಅವಲೋಕಿಸಿ ಕೊರೊನಾ ಸೋಂಕಿತರ ಆರೋಗ್ಯ ವಿಚಾರಿಸಿ ತಕ್ಷಣವೇ ಜಿಲ್ಲಾಧಿಕಾರಿಗಳಿಗೆ ಆಸ್ಪತ್ರೆಯ ಪರಿಸ್ಥಿತಿ ವಿವರಿಸಿದರು.

ತಾಲ್ಲೂಕು ಅಧಿಕಾರಿಗಳ ತಂಡದೊಂದಿಗೆ ರಾತ್ರಿ ಖಾಲಿ ಸಿಲಿಂಡರ್‌ಗಳನ್ನು ತೆಗೆದುಕೊಂಡು ಹರಿಹರದ ದಿ ಸದರನ್ ಗ್ಯಾಸ್ ಲಿಮಿಟೆಡ್ ಕಂಪೆನಿಗೆ ಭೇಟಿ ನೀಡಿ 22 ಜಂಬೋ ಮತ್ತು 2 ಸಣ್ಣ ಸಿಲಿಂಡರ್ ವ್ಯವಸ್ಥೆ ಮಾಡಿಕೊಂಡು ಹೊನ್ನಾಳಿಗೆ ರಾತ್ರಿ 2 ಗಂಟೆಯ ನಂತರ ಆಗಮಿಸಿ ಕೊರೊನಾ ಸೋಂಕಿತ ರೋಗಿಗಳ ಜೀವ ಉಳಿಸುವ ಕಾರ್ಯಕ್ಕೆ ಮುಂದಾದರು ಎನ್ನಲಾಗಿದೆ.

ಶಾಸಕರು 2 ಬಾರಿ ಕೊರೊನಾ ಸೋಂಕಿಗೆ ತುತ್ತಾಗಿದ್ದರೂ ಎದೆಗುಂದದೇ ಪ್ರತಿ ನಿತ್ಯ ಆಸ್ಪತ್ರೆಗೆ ಭೇಟಿ ನೀಡಿ, ಲಸಿಕೆ ಸಮರ್ಪಕವಾಗಿ ಸಿಗುವಂತೆ ನೋಡಿಕೊಳ್ಳುತ್ತಾ ಪಿಪಿಇ ಕಿಟ್ ಧರಿಸಿ ಕೋವಿಡ್ ಸೋಂಕಿತರ ವಾರ್ಡ್‌ಗಳಿಗೂ ಭೇಟಿ ನೀಡಿ ಅವರ ಯೋಗಕ್ಷೇಮವನ್ನೂ ವಿಚಾರಿಸುತ್ತಾ ಬಂದಿದ್ದಾರೆ.

ಆಕ್ಸಿಜನ್ ವಾರ್ಡಿನಲ್ಲಿ ಆಕ್ಸಿಜನ್ ಕಡಿಮೆಯಾಗುತ್ತಿದೆ ಎಂಬ ವಿಚಾರ ತಿಳಿಯುತ್ತಿದ್ದಂತೆ ಪಿಪಿಇ ಕಿಟ್ ಧರಿಸಿ ಕೊರೊನಾ ಸೋಂಕಿತರ ವಾರ್ಡ್‌ಗೆ ಭೇಟಿ ನೀಡಿದ ಶಾಸಕರು ಸೋಂಕಿತರ ಆರೋಗ್ಯ ವಿಚಾರಿಸಿ ಆತ್ಮಸ್ಥೈರ್ಯ ತುಂಬಿದರು.

ಕೊರೊನಾ ರೋಗಿಗಳ ಶೋಚನಿಯ ಪರಿಸ್ಥಿತಿ ಕಣ್ಣಾರೆ ಕಂಡು ಭಾವುಕರಾದಂತೆ ಕಂಡುಬಂದ ಶಾಸಕರು ಆಕ್ಸಿಜನ್ ವ್ಯವಸ್ಥೆಗೆ ಮುಂದಾದರು.

ಅಂಬೇಡ್ಕರ್ ಭವನದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಸಾರ್ವಜನಿಕರು ಆಗಮಿಸಿದಾಗ ಬೀಗ ಕಳೆದಿದೆ ಎಂದು ಆಸ್ಪತ್ರೆಯ ಸಿಬ್ಬಂದಿ ಹೇಳಿದ ತಕ್ಷಣವೇ ಕಬ್ಬಿಣದ ರಾಡು ತೆಗೆದುಕೊಂಡು ಶಾಸಕರೇ ಬೀಗ ಒಡೆದು ಸಾರ್ವಜನಿಕರು ಲಸಿಕೆ ಪಡೆಯಲು ಅನುಕೂಲ ಮಾಡಿಕೊಟ್ಟರು.

**20 ಜಂಬೋ ಆಕ್ಸಿಜನ್ ಸಿಲಿಂಡರ್‌ಗೆ ಮನವಿ:** ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳು ದಿನೇದಿನೇ ಹೆಚ್ಚುತ್ತಿದ್ದು ರೋಗಿಗಳ ನಿರ್ವಹಣೆಗೆ ತುರ್ತಾಗಿ ಆಕ್ಸಿಜನ್ ಗಾಗಿ 20 ಜಂಬೋ ಸಿಲಿಂಡರ್ ಅವಶ್ಯಕತೆ ಇದ್ದು ಅದನ್ನು ಒದಗಿಸಿಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

ತಹಸೀಲ್ದಾರ್ ಬಸವನಗೌಡ ಕೋಟೂರ, ಸಿಪಿಐ ದೇವರಾಜ್, ಎಸ್‌ಐಗಳಾದ ಬಸವನಗೌಡ ಬಿರಾದಾರ್, ರಮೇಶ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳಿದ್ದರು.

## ನೂರಕ್ಕೂ ಹೆಚ್ಚು ಜಡ್ಜ್‌ಗಳಿಗೆ ಸೋಂಕು

ನವದೆಹಲಿ, ಮೇ 13 – ಕೊರೊನಾದಿಂದ ನ್ಯಾಯಮೂರ್ತಿಗಳು ಹಾಗೂ ರಿಜಿಸ್ಟ್ರಿ ಅಧಿಕಾರಿಗಳು ಸೇರಿದಂತೆ ಎಲ್ಲರೂ ಪ್ರಭಾವಿತರಾಗಿದ್ದಾರೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಹೇಳಿದ್ದು, ಹೈಕೋರ್ಟ್‌ಗಳ 100ಕ್ಕೂ ಹೆಚ್ಚು ನ್ಯಾಯಮೂರ್ತಿಗಳು ಹಾಗೂ 2,700 ಅಧಿಕಾರಿಗಳು ಸೋಂಕಿಗೆ ಗುರಿಯಾಗಿರುವುದಾಗಿ ತಿಳಿಸಿದ್ದಾರೆ.

ಇದುವರೆಗೂ ಸುಪ್ರೀಂ ಕೋರ್ಟ್‌ನಲ್ಲಿ ರಿಜಿಸ್ಟ್ರಿಯ 800ರಷ್ಟು ಸಿಬ್ಬಂದಿ ಸೋಂಕಿಗೆ ಗುರಿಯಾಗಿದ್ದಾರೆ. ಆರು ರಿಜಿಸ್ಟ್ರಾರ್‌ಗಳು ಹಾಗೂ 10 ಹೆಚ್ಚುವರಿ ರಿಜಿಸ್ಟ್ರಾರ್‌ಗಳು ಬೇರೆ ಬೇರೆ ಹಂತಗಳಲ್ಲಿ ಸೋಂಕಿಗೆ ಗುರಿಯಾಗಿದ್ದಾರೆ ಎಂದು ನ್ಯಾಯಮೂರ್ತಿ ರಮಣ ಹೇಳಿದ್ದಾರೆ.

2,768 ನ್ಯಾಯಿಕ ಅಧಿಕಾರಿಗಳು ಹಾಗೂ ಹೈಕೋರ್ಟ್‌ನ 106 ನ್ಯಾಯಮೂರ್ತಿಗಳಿಗೆ ಕೊರೊನಾ ಪಾಸಿಟಿವ್ ಬಂದಿದೆ. 34 ನ್ಯಾಯಿಕ ಅಧಿಕಾರಿಗಳು ಹಾಗೂ ಹೈಕೋರ್ಟ್‌ನ ಮೂರು ನ್ಯಾಯಮೂರ್ತಿಗಳು ಸೋಂಕಿನಿಂದ ಪ್ರಾಣ ಕಳೆದುಕೊಂಡಿದ್ದಾರೆ ಎಂದವರು ಹೇಳಿದ್ದಾರೆ.

## ಸಾಹಿತಿ ಡಾ. ಪ್ರಕಾಶ್ ಹಲಗೇರಿ ನಿಧನ



ದಾವಣಗೆರೆ,ಮೇ 13- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ. ಪ್ರಕಾಶ್ ಹಲಗೇರಿ ಅವರು ಇಂದು ಬೆಳಿಗ್ಗೆ 8.30ಕ್ಕೆ ಅಕಾಲಿಕವಾಗಿ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪಡೆಯುತ್ತಿದ್ದ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದರು. ಮೃತರಿಗೆ ಸುಮಾರು 48 ವರ್ಷ ವಯಸ್ಸಾಗಿತ್ತು.

ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಹಿರೇಕೆರೂರು ತಾಲ್ಲೂಕಿನ ಹಲಗೇರಿ ಹತ್ತಿರದ ಬತ್ತಿಕೊಪ್ಪದಲ್ಲಿರುವ ಅವರ ಸ್ವಂತ ತೋಟದಲ್ಲಿ ಇಂದು ಸಂಜೆ ನಡೆಯಿತು.

ಉತ್ತಮ ಅಧ್ಯಾಪಕರಾಗಿದ್ದ ಅವರು, ವಿಮರ್ಶೆ, ಕವನ ಸಂಕಲನಗಳೂ ಸೇರಿದಂತೆ ಹತ್ತಾರು ಕೃತಿಗಳನ್ನು ಹೊರತಂದಿದ್ದರು. ಅನೇಕ ವಿಚಾರ ಸಂಕಿರಣ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

ಪ್ರಕಾಶ್ ಹಲಗೇರಿ ಅವರ ನಿಧನಕ್ಕೆ ಕಾಲೇಜಿನ ಪ್ರಾಂಶುಪಾಲ ಶಂಕರ್ ಶೀಲಿ, ಕನ್ನಡ ವಿಭಾಗದ ಮುಖ್ಯಸ್ಥ ಎಚ್. ಗಿರಿಸ್ವಾಮಿ, ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್ ಹಾಗೂ ಅಧ್ಯಾಪಕ - ಅಧ್ಯಾಪಕೇತರ ಸಿಬ್ಬಂದಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಪ್ರಕಾಶ್ ಹಲಗೇರಿ ಅವರ ನಿಧನಕ್ಕೆ ಕಂಬನಿ ಮಿಡಿದಿರುವ ಕನ್ನಡ ಉಪನ್ಯಾಸಕ ಜಂಬಗಿ ಮೃತ್ಯುಂಜಯ, ಡಾ. ಪ್ರಕಾಶ್ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅನುಪಮ ಎಂದು ಹೇಳಿದ್ದಾರೆ.

## ಇಂದಿನಿಂದ 2ನೇ ಡೋಸ್ ಲಸಿಕೆ

**(1ನೇ ಪುಟದಿಂದ)** ಲಸಿಕೆಯನ್ನು ನಗರವ್ಯಾಪ್ತಿಯ ಆರೋಗ್ಯ ಕೇಂದ್ರಗಳಲ್ಲಿ ಮೊದಲ ಡೋಸ್ ಪಡೆದು 7 ರಿಂದ 8 ವಾರ ಪೂರೈಸಿರುವವರಿಗೆ ನೀಡಲಾಗುವುದು. ಕೋವ್ಯಾಕ್ಸಿನ್ ಲಸಿಕೆಯ ಮೊದಲ ಡೋಸ್ ಪಡೆದು 4 ರಿಂದ 5 ವಾರ ಪೂರೈಸಿರುವವರು ಸಿ.ಜಿ. ಆಸ್ಪತ್ರೆಯಲ್ಲಿ 2ನೇ ಡೋಸ್ ಲಸಿಕೆ ಪಡೆಯಬಹುದು ಎಂದು ಆರ್‌ಸಿಹೆಚ್ ಡಾ.ಮೀನಾಕ್ಷಿ ತಿಳಿಸಿದ್ದಾರೆ.

## ಶ್ರೀಮತಿ ಶಾರದಮ್ಮ ಎಂ. ನಿಧನ



ಆನೆಕೊಂಡ ಮಠದ ಶ್ರೀ ಮಹಾದೇವಯ್ಯನವರ ಧರ್ಮಪತ್ನಿ
**ಶ್ರೀಮತಿ ಶಾರದಮ್ಮ (59)**
ಅವರು ದಿನಾಂಕ 13-5-2021 ನೇ ಗುರುವಾರ ಮಧ್ಯಾಹ್ನ 12.20 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಸೊಸೆ, ಅಳಿಯಂದಿರು, ಮೊಮ್ಮೊಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.05.2021 ರ ಗುರುವಾರ ಸಂಜೆ 6.30ಕ್ಕೆ ನೆರವೇರಿಸಲಾಯಿತು.

ಇಂತಿ ದುಃಖತಪ್ತ ಕುಟುಂಬ
**ಮಹಾದೇವಯ್ಯ ಮತ್ತು ಮಕ್ಕಳು.**

## ಬಿಂದಪ್ಪ ಬಿ. ಮಲ್ಲಿಕಾರ್ಜುನಪ್ಪ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 4ನೇ ಕ್ರಾಸ್ # 627/10 'ಶಿವಕೃಪ' ವಾಸಿ
**ಬಿ. ಮಲ್ಲಿಕಾರ್ಜುನಪ್ಪ** (69)
ಅವರು ದಿನಾಂಕ 13.05.2021 ರ ಗುರುವಾರ ಸಂಜೆ 6.30ಕ್ಕೆ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪುತ್ರಿ, ಅಳಿಯ, ಮೊಮ್ಮಕ್ಕಳು, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.05.2021ರ ಗುರುವಾರ ರಾತ್ರಿ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತರು
ಮಗಳು: **ಜ್ಯೋತಿ ಮೋಹನ್ ರಾಜ್, ಅಳಿಯ, ಮೊಮ್ಮಕ್ಕಳು, ಸಹೋದರರು ಹಾಗೂ ಬಿಂದಪ್ಪರ ವಂಶಸ್ಥರು ಬಂಧು-ಮಿತ್ರರು, ಶಾಮನೂರು.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 13.5.2021ರಂದು ಅಕಾಲಿಕವಾಗಿ ನಿಧನರಾದ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸಹಾಯಕ ಪ್ರಧಾನ ವ್ಯವಸ್ಥಾಪಕರೂ, ನಮ್ಮ ಆತ್ಮೀಯರೂ ಆದ
**ಶ್ರೀ ಎಸ್. ಎಸ್. ಗುಂಜಾಳ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಜಿ.ಸಿ. ರಮೇಶ್, ಎಜಿಎಂ**
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಸಂತೇಬೆನ್ನೂರು ಶಾಖೆ

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಕಾಸಲ್ ವೆಂಕಟೇಶ್,** ವರ್ತಕರು, ದಾವಣಗೆರೆ.

ಶ್ರೀ ಸತ್ಯಸಾಯಿಬಾಬಾರವರ ಅನನ್ಯ ಭಕ್ತರೂ, ಈಶ್ವರಮ್ಮ ಟ್ರಸ್ಟ್‌ನ ಮಾಜಿ ಅಧ್ಯಕ್ಷರಾಗಿದ್ದ ದಿ|| ಕಾಸಲ್ ಅನಂತಣ್ಣ, ಶ್ರೀಮತಿ ರತ್ನಮ್ಮ ಕಾಸಲ್ ಅವರ ಪುತ್ರರೂ, ವರ್ತಕರೂ, ದಾನಿಗಳೂ ಆದ
**ಶ್ರೀ ಕಾಸಲ್ ವೆಂಕಟೇಶ್** ಅವರು
ದಿನಾಂಕ 12.05.2021ರ ರಾತ್ರಿ 11.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಮತ್ತು ಮೃತರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ಭಗವಾನ್ ಶ್ರೀ ಸತ್ಯಸಾಯಿಬಾಬಾರಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು
**ಈಶ್ವರಮ್ಮ ಟ್ರಸ್ಟ್ (ರಿ.) ದಾವಣಗೆರೆ**
ಸಂಚಾಲಕರು ಮತ್ತು ಸದಸ್ಯರು,
**ಶ್ರೀ ಸತ್ಯಸಾಯಿಸೇವಾ ಸಮಿತಿ, ದಾವಣಗೆರೆ.**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 10.5.2021ರಂದು ಅಕಾಲಿಕವಾಗಿ ನಿಧನರಾದ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮೋರ್ಚಾ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ಉತ್ತರ ಮಂಡಲ ಜಾಲತಾಣ ಪ್ರಮುಖ್ ಆಗಿ ಸೇವೆ ಸಲ್ಲಿಸುತ್ತಿದ್ದ
**ಶ್ರೀ ನಾಗರಾಜ್ ಕೆ.ಪಿ.**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ನವಚೇತನದ ಚಿಲುಮೆ**
ನಿಷ್ಕಲ್ಮಷ ಮನಸಿನ, ಗೆಳೆತನಕ್ಕೆ ಮತ್ತೊಂದು ಹೆಸರಾಗಿದ್ದ ಕಾಯಕಯೋಗಿ, ಆತ್ಮೀಯ ಗೆಳೆಯನಿಗೆ ಭಾವಪೂರ್ಣ ಶ್ರದ್ಧಾಂಜಲಿ.

**ಕೆ.ಪಿ.ಎನ್. ಗೆಳೆಯರ ಬಳಗ**

## ಕದಳಿಯಿಂದ ತಾಯಂದಿರ ದಿನ

ಕದಳಿ ಮಹಿಳಾ ವೇದಿಕೆ ತಾಲ್ಲೂಕು ಘಟಕದ ವತಿಯಿಂದ 125ನೇ ಕದಳಿ ಕಮ್ಮಟದಲ್ಲಿ ಬಸವ ಜಯಂತಿ ಹಾಗೂ ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ಸದಸ್ಯೆಯರಿಗೆ ಶರಣರ ವೇಷಭೂಷಣ ಹಾಗೂ ವಚನ ವಿಶ್ಲೇಷಣೆ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಇಂದು ಮಧ್ಯಾಹ್ನ 12.30 ಕ್ಕೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಸುಮ ಲೋಕೇಶ್ ವಹಿಸುವರು. ಮುಖ್ಯ ಅತಿಥಿಗಳಾಗಿ ಅಂಬುಜ ಕೆ. ಆಗಮಿಸುವರು. 'ವರ್ತಮಾನ ತಲ್ಲಣಗಳಲ್ಲಿ ತಾಯಂದಿರ ಪಾತ್ರ, ಬಸವ ವಚನಾಮೃತ' ಉಪನ್ಯಾಸದ ವಿಷಯ ಆಗಿದೆ. ಕಾರ್ಯಕ್ರಮದಲ್ಲಿ ಶಂಶಾದ್ ಬೇಗಮ್ ಉಪಸ್ಥಿತರಿರುವರು.

## ವಿರಕ್ತ ಮಠದಲ್ಲಿ ಬಸವ ಜಯಂತಿ

ಬಸವ ಜಯಂತಿ ಪ್ರಾರಂಭಿಸಿದ ಐತಿಹಾಸಿಕ ನಗರದ ಶ್ರೀ ವಿರಕ್ತ ಮಠದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಸರಳವಾಗಿ ಆಚರಿಸಲಾಗುತ್ತದೆ ಎಂದು ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದ್ದಾರೆ.



## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 12.5.2021ರಂದು ಅಕಾಲಿಕವಾಗಿ ನಿಧನರಾದ ನಮ್ಮ ಬ್ಯಾಂಕಿನ ವಿಶೇಷ ಆಹ್ವಾನಿತರಾದ
**ಶ್ರೀ ಪಿ. ಮಹಾದೇವಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಸಂಗ್ರಹಕಾರರು**

**ಕನಕ ಪಟ್ಟಣ ಸಹಕಾರ ಬ್ಯಾಂಕ್**
**ಮಂಡಿಪೇಟೆ, ದಾವಣಗೆರೆ.**

# ಡಿಸೆಂಬರ್ ವೇಳೆಗೆ 216 ಕೋಟಿ ಡೋಸ್ ಲಸಿಕೆ


ನವದೆಹಲಿ, ಮೇ 13 – ಬರುವ ಆಗಸ್ಟ್‌ನಿಂದ ಡಿಸೆಂಬರ್ ನಡುವೆ ದೇಶಕ್ಕೆ 200 ಕೋಟಿಗೂ ಹೆಚ್ಚಿನ ಲಸಿಕೆಗಳು ದೊರೆಯಲಿವೆ. ಇದು ಇಡೀ ಜನಸಂಖ್ಯೆಗೆ ಸಾಕಾಗುವಷ್ಟಾಗಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ದೇಶಾದ್ಯಂತ ಕೊರೊನಾ ಲಸಿಕೆಯ ಕೊರತೆ ಉಲ್ಬಣಿಸುತ್ತಿರುವುದರ ನಡುವೆ ಹೇಳಿಕೆ ನೀಡಿರುವ ನೀತಿ ಆಯೋಗದ ಸದಸ್ಯ ವಿ.ಕೆ ಪೌಲ್, ರಷ್ಯಾದ ಲಸಿಕೆಯಾದ ಸ್ಪುಟ್ನಿಕ್ ವಿ ಮುಂದಿನ ವಾರ ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ.

ಲಸಿಕೆ ಕೊರತೆಯಾಗಿದೆ ಎಂಬುದನ್ನು ಒಪ್ಪಿಕೊಂಡಿರುವ ಪೌಲ್, ಲಸಿಕೆ ಉತ್ಪಾದನೆಗೆ ಸ್ವಲ್ಪ ಸಮಯ ಬೇಕಾಗುತ್ತದೆ. ಈಗ ನಾವು ಸೀಮಿತ ಪೂರೈಕೆಯ ಕಾಲದಲ್ಲಿದ್ದೇವೆ ಎಂದಿದ್ದಾರೆ. ಹೀಗಾಗಿಯೇ ನಾವು ಆದ್ಯತೆ ಮೇಲೆ ಲಸಿಕೆ ನೀಡುತ್ತಿದ್ದೇವೆ ಎಂದಿರುವ ಅವರು, ಇಡೀ ದೇಶಕ್ಕೆ ಆಗುವಷ್ಟು ಲಸಿಕೆ ವರ್ಷಾಂತ್ಯದ ವೇಳೆಗೆ ಲಭ್ಯವಾಗಲಿದೆ ಎಂದಿದ್ದಾರೆ.

ಆಗಸ್ಟ್‌ನಿಂದ ಡಿಸೆಂಬರ್ ನಡುವಿನ ಐದು ತಿಂಗಳಲ್ಲಿ 200 ಕೋಟಿಗೂ ಹೆಚ್ಚು ಡೋಸ್ ಲಸಿಕೆ ಲಭ್ಯವಾಗಲಿದೆ. ಮುಂದಿನ ವರ್ಷ ಮೊದಲ ಚತುರ್ಥದ ವೇಳೆಗೆ 300 ಕೋಟಿ ಡೋಸ್ ಲಸಿಕೆ ಲಭ್ಯವಾಗಲಿದೆ ಎಂದವರು ತಿಳಿಸಿದ್ದಾರೆ.

ಆಗಸ್ಟ್‌ನಿಂದ ಡಿಸೆಂಬರ್ ನಡುವೆ 216



**ಮುಂದಿನ ವಾರ ಸ್ಪುಟ್ನಿಕ್ ವಿ ಲಸಿಕೆ ಲಭ್ಯ**

ಕೋಟಿ ಡೋಸ್ ಲಸಿಕೆ ಲಭ್ಯವಾಗುವ ಅಂದಾಜಿದೆ. ಇದರಲ್ಲಿ ಕೋವಿಶೀಲ್ಡ್ 75 ಕೋಟಿ ಡೋಸ್ ಹಾಗೂ ಕೊವ್ಯಾಕ್ಸಿನ್ 55 ಕೋಟಿ ಡೋಸ್ ಎಂದವರು ತಿಳಿಸಿದ್ದಾರೆ.

ಬಯಾಲಜಿಕಲ್ ಇ 30 ಕೋಟಿ ಡೋಸ್, ಜೈಡಸ್ ಕ್ಯಾಡಿಲಾ 5 ಕೋಟಿ, ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಮೂಲಕ 20 ಕೋಟಿ ನೊವಾವ್ಯಾಕ್ಸ್, ಜಿನ್ನೊವಾದಿಂದ 6 ಕೋಟಿ ಹಾಗೂ ಸ್ಪುಟ್ನಿಕ್ ವಿ 15.6 ಕೋಟಿ ಡೋಸ್ ಲಸಿಕೆ ಲಭ್ಯವಾಗಲಿದೆ ಎಂದವರು ವಿವರಿಸಿದ್ದಾರೆ.

ಈ ಎಲ್ಲ ಲಸಿಕೆಗಳು ಔಷಧೀಯ ಪ್ರಯೋಗದ ಹಲವಾರು ಹಂತಗಳಲ್ಲಿವೆ ಎಂದವರು ಹೇಳಿದ್ದಾರೆ.

ಫೈಜರ್, ಮೊಡೆರ್ನಾ ಹಾಗೂ ಜಾನ್ಸನ್ ಅಂಡ್ ಜಾನ್ಸನ್ ಕಂಪನಿಗಳ ಲಸಿಕೆಗಳನನ್ನು ಖರೀದಿಸುವುದಕ್ಕೆ ಸಂಬಂಧಿಸಿದಂತೆ ಆ ಕಂಪನಿಗಳ ಸಂಪರ್ಕದಲ್ಲಿದ್ದೇವೆ ಎಂದೂ ಪೌಲ್ ಹೇಳಿದ್ದಾರೆ.

# ಕಠಿಣ ನಿರ್ಬಂಧಗಳಿಂದ ಕೊರೊನಾ ನಿಯಂತ್ರಣ

ಬೆಂಗಳೂರು, ಮೇ 13 - ಸರ್ಕಾರದ ಕಠಿಣ ಕ್ರಮದಿಂದ ರಾಜ್ಯದಲ್ಲಿ ಕೊರೊನಾ ಸೋಂಕು ನಿಯಂತ್ರಣಕ್ಕೆ ಬರುತ್ತಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ಸರ್ಕಾರದ ಕಠಿಣ ನಿರ್ಧಾರಗಳನ್ನು ಚಾಚೂ ತಪ್ಪದೇ ಪಾಲಿಸಿದರೆ, ಪೂರ್ಣ ನಿಯಂತ್ರಣಕ್ಕೆ ಬರಲು ಸಾಧ್ಯವಾಗುತ್ತದೆ ಎಂದರು.

ಸೋಂಕಿಗೆ ಹೆದರುವುದು ಬೇಡ. ಆದರೆ ಸ್ವಯಂ ಪ್ರೇರಿತವಾಗಿ ನಿರ್ಬಂಧ ಹಾಕಿಕೊಳ್ಳಿ. ಇದರಿಂದ ಅಷ್ಟೇ ಈ ಮಹಾಮಾರಿಯನ್ನು ಹೋಗಲಾಡಿಸಬಹುದು ಎಂದು ಹೇಳಿದರು. ಏಪ್ರಿಲ್ 24 ರಿಂದ ಕೆಲವು ನಿರ್ಬಂಧ ಹೇರಿದ್ದೆವು, ಆನಂತರ ಮೇ 10 ರಿಂದ ಕಠಿಣ ಕ್ರಮ ಕೈಗೊಂಡಿದ್ದರಿಂದ ಪರಿಸ್ಥಿತಿ ಸುಧಾರಿಸುತ್ತಿದೆ.

ಮೇ 5 ರಂದು ರಾಜ್ಯದಲ್ಲಿ 50,112 ಕನಿಷ್ಠ ಪ್ರಮಾಣದಲ್ಲಿ ಜನರು ಸೋಂಕಿಗೆ ಒಳಗಾಗಿದ್ದರು. ಆದರೆ ನಿನ್ನೆ ಇದರ ಪ್ರಮಾಣ 39,500ಕ್ಕೆ ಇಳಿದಿದೆ. ಬೆಂಗಳೂ ರಿನಲ್ಲಿ 23106 ಇದ್ದದ್ದು, ನಿನ್ನೆ 16286 ಪ್ರಕರಣಗಳು ದಾಖಲಾಗಿವೆ ಇದೊಂದು ಸಮಾಧಾನದ ಸಂಗತಿ ಎಂದವರು ತಿಳಿಸಿದರು. ಜನತೆ ಸಹಕಾರ ನೀಡಿದರೆ ಸೋಂಕನ್ನು ಮೆಟ್ಟಿ ನಿಲ್ಲಲು ಸರ್ಕಾರ ಎಲ್ಲಾ ರೀತಿಯಲ್ಲಿ ಸಜ್ಜಾಗಿದೆ. ಇದಕ್ಕಾಗಿ ಹತ್ತು ಹಲವು ನಿಯಂತ್ರಣ ಗಳನ್ನು ಜಾರಿಗೆ ತರುತ್ತಿದ್ದೇವೆ ಎಂದರು.



ಸೋಂಕಿತರಿಗೆ ಅಗತ್ಯವಾದ ಆಮ್ಲಜನಕ, ರೆಮ್ ಡಿಸಿವಿರ್ ಇಂಜೆಕ್ಷನ್, ಔಷಧಿಗಳು ಸಕಾಲದಲ್ಲಿ ದೊರೆಯಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಗಿದೆ. ಕಳೆದ ಮಾರ್ಚ್‌ನಲ್ಲಿ ನಮ್ಮ ಆಸ್ಪತ್ರೆಯಲ್ಲಿದ್ದ ಮೂಲಸೌಕರ್ಯವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ.

ಸೋಂಕಿತರಿಗೆ ಸಕಾಲಕ್ಕೆ ಔಷಧಿ ಅಗತ್ಯ ವಿದ್ದವರಿಗೆ ಆಸ್ಪತ್ರೆಯಲ್ಲಿ ಹಾಸಿಗೆ ಲಭ್ಯವಾಗುವಂತೆ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದೇವೆ. ಆಮ್ಲಜನಕ ಹಾಸಿಗೆಗಳನ್ನು 1970 ರಿಂದ 24 ಸಾವಿರಕ್ಕೂ, ಐಸಿಯು ಹಾಸಿಗೆಗಳನ್ನು 444 ರಿಂದ 1155ಕ್ಕೂ, ವೆಂಟಿಲೇಟರ್ ಹಾಸಿಗೆಯನ್ನು 640 ರಿಂದ 2059 ಕ್ಕೆ ಏರಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲ ಸೌಕರ್ಯ ಕಲ್ಪಿಸುವುದು ಮುಂದುವರೆದಿದೆ. ಆಮ್ಲಜನಕ ಪೂರೈಕೆ ಸುಧಾರಣೆ ಕಂಡಿದೆ. ನಮಗೆ ಅಗತ್ಯವಾಗಿರುವ ಆಮ್ಲಜನಕವನ್ನು ಉತ್ಪಾದಿಸುವ ಜೊತೆಗೆ ಖರೀದಿಸಲು ಮುಂದಾಗಿದ್ದೇವೆ ಎಂದವರು ಹೇಳಿದ್ದಾರೆ.

ಕೇಂದ್ರ ಸರ್ಕಾರವು ರಾಜ್ಯಕ್ಕೆ ನಿಗದಿಪಡಿಸಿದ್ದ 955 ಮೆಟ್ರಿಕ್‌ಟನ್‌ನಿಂದ 1015 ಮೆಟ್ರಿಕ್ ಟನ್‌ಗೆ ಹೆಚ್ಚಳ ಮಾಡಿದೆ. ಅಲ್ಲದೆ ಇತರೆ ರಾಜ್ಯಗಳಿಂದ ಆಮ್ಲಜನಕ ಖರೀದಿಗೆ ಮುಂದಾಗಿದ್ದೇವೆ ಎಂದರು.

ಸಂಭವಿತ 3ನೇ ಅಲೆಯನ್ನು ಎದುರಿಸಲು ಸರ್ಕಾರ ಈಗಿನಿಂದಲೇ ಸಜ್ಜುಗೊಂಡಿದೆ. ಸರ್ಕಾರ ಯಾವ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕೆಂದು ಮಾಹಿತಿ ಪಡೆಯಲು ಡಾ. ದೇವಿಶೆಟ್ಟಿ ನೇತೃತ್ವದಲ್ಲಿ ಕಾರ್ಯಪಡೆ ರಚಿಸಲಾಗಿದೆ ಎಂದು ಯಡಿಯೂರಪ್ಪ ಇದೇ ಸಂದರ್ಭದಲ್ಲಿ ತಿಳಿಸಿದರು. ಅಲ್ಲದೆ, 3 ಕೋಟಿ ಡೋಸ್ ಲಸಿಕೆ ಖರೀದಿಸಲು ಜಾಗತಿಕ ಟೆಂಡರ್ ಕರೆಯಲಾಗಿದೆ. ಕೇಂದ್ರ ಸರ್ಕಾರವು 45 ವರ್ಷ ಮೇಲ್ಪಟ್ಟವರಿಗೆ ಉಚಿತ ಲಸಿಕೆ ಪೂರೈಸುತ್ತದೆ. ಇದುವರೆಗೂ 1 ಕೋಟಿ 10 ಲಕ್ಷ ಡೋಸ್ ಲಸಿಕೆಯನ್ನು ಕೇಂದ್ರ ಸರ್ಕಾರ ನೀಡಿದೆ ಎಂದವರು ಹೇಳಿದರು.

ಪ್ರತಿಕಾಗೋಷ್ಠಿಯಲ್ಲಿ ಹಾಜರಿದ್ದ ಉಪಮುಖ್ಯಮಂತ್ರಿ ಡಾ. ಅಶ್ವತ್ಥನಾರಾಯಣ್, ಸಚಿವರಾದ ಆರ್. ಅಶೋಕ್, ಡಾ. ಸುಧಾಕರ್, ಹಾಗೂ ಅರವಿಂದ ಲಿಂಬಾವಳಿ, ಸರ್ಕಾರ ಕೈಗೊಂಡಿರುವ ತೀರ್ಮಾನಗಳನ್ನು ಅಂಕಿ - ಅಂಶಗಳ ಸಮೇತ ನೀಡಿದರು.

# ಹರಿಹರ ತಾಲ್ಲೂಕಿನಲ್ಲಿ ಒಂದೇ ದಿನ 122 ಜನರಿಗೆ ಪಾಸಿಟಿವ್

ಮಲೇಬೆನ್ನೂರು, ಮೇ 13- ಹರಿಹರ ತಾಲ್ಲೂಕಿನಲ್ಲಿ ಗುರುವಾರ ಬೆಳಿಗ್ಗೆ ಬಂದಿರುವ ಕೋವಿಡ್ ಟೆಸ್ಟ್ ವರದಿಯಲ್ಲಿ 122 ಜನರಿಗೆ ಸೋಂಕು ದೃಢಪಟ್ಟಿದೆ. ಕೊರೊನಾ 2ನೇ ಅಲೆಯಲ್ಲಿ ಒಂದೇ ದಿನ ಇಷ್ಟೊಂದು ಕೇಸ್‌ಗಳು ಬಂದಿರುವುದು ಇದೇ ಪ್ರಥಮವಾಗಿದ್ದು, ಜನರಲ್ಲಿ ಮತ್ತಷ್ಟು ಆತಂಕ ಹೆಚ್ಚಾಗುತ್ತಿದೆ.

**ಬೇಸರ :** ಹರಿಹರ ತಾಲ್ಲೂಕಿನಲ್ಲಿ ಕೊರೊನಾ ನಿಯಂತ್ರಣಕ್ಕಾಗಿ ಅಧಿಕಾರಿಗಳು, ಕೊರೊನಾ ವಾರಿಯರ್ಸ್ ಶ್ರಮಿಸುತ್ತಿದ್ದರೂ ಜನರ ನಿರ್ಲಕ್ಷದಿಂದಾಗಿ ಸೋಂಕು ಹರಡುವಿಕೆ ಹೆಚ್ಚಾಗುತ್ತಿರುವುದು ಬೇಸರ ತಂದಿದೆ ಎಂದು ಹಿರಿಯ ವೈದ್ಯ ಡಾ. ಬಿ.ಎಸ್. ಸಾತೇನಹಳ್ಳಿ ತಿಳಿಸಿದ್ದಾರೆ.

ವಿನಾಕಾರಣ ಸುತ್ತಾಡುವ ಜನರು ತಮ್ಮ ಜೀವದ ಜೊತೆಗೆ ಇತರರ ಜೀವಕ್ಕೂ ತೊಂದರೆ ಆಗಲಿದೆ ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಮಾಸ್ಕ್ ಧರಿಸದೆ ಮನೆಯಿಂದ ಯಾರೂ ಹೊರ ಬರಬಾರದು, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕೆಂದು ಡಾ. ಸಾತೇನಹಳ್ಳಿ ಮನವಿ ಮಾಡಿದ್ದಾರೆ.

**65 ಜನರಿಗೆ ಸೋಂಕು :** ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳಿನ ಇಲ್ಲಿಯವರೆಗೆ ನಡೆದ ಕೋವಿಡ್ ಟೆಸ್ಟ್‌ನಲ್ಲಿ 65 ಜನರಿಗೆ ಸೋಂಕು ಕಾಣಿಸಿಕೊಂಡಿದೆ.

ಇದುವರೆಗೂ ಮಲೇಬೆನ್ನೂರು ಪಟ್ಟಣದಲ್ಲಿ 28 ಜನರಿಗೆ ಮತ್ತು ಸುತ್ತಮುತ್ತಲಿನ ಹಳ್ಳಿಗಳ 37 ಜನರಿಗೆ ಕೊರೊನಾ ಪಾಸಿಟಿವ್ ಬಂದಿದೆ.

# ಕೋವಿಶೀಲ್ಡ್ ಡೋಸ್‌ಗಳ ನಡುವಿನ ಅಂತರ 12-16 ವಾರಗಳಿಗೆ ಹೆಚ್ಚಳ

ನವದೆಹಲಿ, ಮೇ 13 –ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳ ನಡುವಿನ ಅಂತರವನ್ನು ಈಗಿರುವ 6-8 ವಾರಗಳಿಂದ 12-16 ವಾರಗಳಿಗೆ ಹೆಚ್ಚಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಕೋವ್ಯಾಕ್ಸಿನ್ ಲಸಿಕೆಯ ನಡುವಿನ ಅಂತರ ಬದಲಿಸಿಲ್ಲ.

ಬ್ರಿಟನ್‌ನಿಂದ ದೊರೆತ ಸಾಕ್ಷಿಗಳನ್ನು ಆಧರಿಸಿ ಕೊರೊನಾ ಪರಿಣಿತರ ಸಮಿತಿ ಕೋವಿಶೀಲ್ಡ್ ಡೋಸ್‌ಗಳ ನಡುವಿನ ಅಂತರವನ್ನು 12-16 ವಾರಗಳಿಗೆ ಹೆಚ್ಚಿಸಲು ಶಿಫಾರಸ್ಸು ಮಾಡಿತ್ತು. ಅದರಂತೆ ಬದಲಾವಣೆ ಮಾಡಲಾಗಿದೆ. ಕೋವ್ಯಾಕ್ಸಿನ್ ಲಸಿಕೆಗಳ ನಡುವಿನ ಅಂತರದ ಬಗ್ಗೆ ಯಾವುದೇ ಶಿಫಾರಸ್ಸು ಬಂದಿಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ರಾಜ್ಯಗಳು ಕೋವಿಶೀಲ್ಡ್ ಫಲಾನುಭವಿಗಳಿಗೆ 12-16 ವಾರಗಳ ನಡುವೆ ಲಸಿಕೆ ನೀಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ ನೀಡಿರುವ ನೀತಿ ಆಯೋಗದ ಸದಸ್ಯ ಡಾ. ವಿ.ಕೆ. ಪೌಲ್, ವೈಜ್ಞಾನಿಕ ಆಧಾರದ ಮೇಲೆ ಲಸಿಕೆಯ ತಾಂತ್ರಿಕ ಸಲಹಾ ಸಮಿತಿ ನೀಡಿರುವ ಶಿಫಾರಸ್ಸನ್ನು ಜಾರಿಗೆ ತರಲಾಗಿದೆ ಎಂದಿದ್ದಾರೆ.

ಬ್ರಿಟನ್ ಈಗಾಗಲೇ ಕೋವಿಶೀಲ್ಡ್ ನಡುವಿನ ಅಂತರವನ್ನು 12 ವಾರಗಳಿಗೆ ಹೆಚ್ಚಿಸಿದೆ. ವಿಶ್ವ ಆರೋಗ್ಯ ಸಂಘಟನೆ ಸಹ ಈ ಬಗ್ಗೆ ಶಿಫಾರಸ್ಸು ಮಾಡಿದೆ. ಆದರೆ, ಹಲವು ದೇಶಗಳು ಲಸಿಕೆ ಪದ್ಧತಿಯಲ್ಲಿ ಬದಲಾವಣೆ ಮಾಡಿಲ್ಲ ಎಂದು ಪೌಲ್ ತಿಳಿಸಿದ್ದಾರೆ.

ಲಸಿಕೆ ಅಂತರ ಹೆಚ್ಚಿಸುವುದರಿಂದ ಅದರ ಪರಿಣಾಮದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಪೌಲ್, ಒಂದು ಡೋಸ್ ಲಸಿಕೆಯ ನಂತರವೇ ಅದರ ಪರಿಣಾಮ ಉತ್ತಮವಾಗಿದೆ. ಹೀಗಾಗಿ ಯಾವುದೇ ಸಮಸ್ಯೆಯಾಗದು ಎಂದು ಹೇಳಿದ್ದಾರೆ.

# ಹೊನ್ನಾಳಿ-ನ್ಯಾಮತಿ ಜನರಿಗೆ ಉಚಿತ ಚಿಕಿತ್ಸೆ



ದಾವಣಗೆರೆ, ಮೇ 13 - ಶಿವಮೊಗ್ಗದಲ್ಲಿರುವ ತಮ್ಮ ಬಾಪೂಜಿ ಆಯುರ್ವೇದ ಕಾಲೇಜಿನಲ್ಲಿ 100 ಆಕ್ಸಿಜನ್ ಬೆಡ್‌ಗಳ ವ್ಯವಸ್ಥೆ ಮಾಡಿ ಹೊನ್ನಾಳಿ - ನ್ಯಾಮತಿ ತಾಲ್ಲೂಕುಗಳ ಜನರಿಗೆ ಉಚಿತವಾಗಿ ಕೊರೊನಾಗೆ ಚಿಕಿತ್ಸೆ ಕೊಡಿಸುವುದಾಗಿ ಶಾಸಕ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ತಿಳಿಸಿದ್ದಾರೆ.

ಕೆಲವೇ ದಿನಗಳಲ್ಲಿ ಆಕ್ಸಿಜನ್ ಬೆಡ್‌ಗಳ ವ್ಯವಸ್ಥೆಯಾಗಲಿದೆ. ಇದಕ್ಕಾಗಿ ಶಿವಮೊಗ್ಗದ ವೈದ್ಯಕೀಯ ಅಧಿಕಾರಿಗಳ ಜೊತೆ ಚರ್ಚಿಸಿ ಪರಿಶೀಲಿಸಲಾಗಿದೆ ಎಂದವರು ಹೇಳಿದ್ದಾರೆ. ಈ ಆಸ್ಪತ್ರೆಗೆ ತೆರಳಲು ತಾಲ್ಲೂಕುಗಳ ಜನರಿಗೆ ಅಗತ್ಯ ಅನುಮತಿಯನ್ನು ಕಲ್ಪಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಶಾಸಕರು ಕೇಳಿದ್ದಾರೆ.

# ಆಮ್ಲಜನಕ ಉತ್ಪಾದನಾ ಘಟಕಕ್ಕೆ ಒತ್ತಾಯ

ಹರಪನಹಳ್ಳಿ, ಮೇ 13- ಕೋವಿಡ್-19 2ನೇ ಅಲೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದ್ದು ಆಮ್ಲಜನಕ ಉತ್ಪಾದನಾ ಘಟಕವನ್ನು ಹರಪನಹಳ್ಳಿಯಲ್ಲಿ ಸ್ಥಾಪಿಸಬೇಕು ಎಂದು ಉಪಮುಖ್ಯ ಮಂತ್ರಿ ಡಾ. ಅಶ್ವತ್ಥ್ ನಾರಾಯಣರವರಿಗೆ ಕೆಪಿಸಿಸಿ ರಾಜ್ಯ ಓಬಿಸಿ ಘಟಕದ ಉಪಾಧ್ಯಕ್ಷ ಡಾ. ಉಮೇಶ್‌ಬಾಬು ಮನವಿ ಸಲ್ಲಿಸಿದರು.

ತಾಲ್ಲೂಕಿನಲ್ಲಿ 10 ವೆಂಟಿಲೇಟರ್, 50 ಆಮ್ಲಜನಕ ಹಾಸಿಗೆಗಳನ್ನು ಮಂಜೂರು ಮಾಡುವಂತೆ ಉಪಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡಾಗ ಜನರ ಆರೋಗ್ಯ ದೃಷ್ಟಿಯಿಂದ ಹರಪನಹಳ್ಳಿಗೆ ಆಮ್ಲಜನಕ ಉತ್ಪಾದನಾ ಘಟಕ ವನ್ನು ಮಂಜೂರು ಮಾಡುವ ಭರವಸೆ ನೀಡಿದ್ದಾರೆ ಎಂದು ಡಾ. ಉಮೇಶಬಾಬು ತಿಳಿಸಿದ್ದಾರೆ.



ಪಕ್ಷಾತೀತವಾಗಿ ಶಾಸಕರು, ಸಂಸದರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಯಾವುದೇ ರೀತಿಯ ರಾಜಕೀಯ ಮಾಡದೆ, ಜನರ ಆರೋಗ್ಯದ ಹಿತ ದೃಷ್ಟಿಯಿಂದ ಸಹಕರಿಸಬೇಕೆಂದು ತಿಳಿಸಿದ್ದಾರೆ. ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶಗಳು ಜಾಸ್ತಿ ಇದ್ದು ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಕೋವಿಡ್ ವ್ಯಾಪಕವಾಗಿ ಹರಡುತ್ತಿದ್ದು, ಆಸ್ಪತ್ರೆಗಳಿಗೆ ಧಾವಿಸುತ್ತಿರುವ ರೋಗಿಗಳಿಗೆ ಜೀವ ಉಳಿಸಲು ವೈದ್ಯರಿಗೆ ಹಾಸಿಗೆ ಮತ್ತು ಆಮ್ಲಜನಕ ಒದಗಿಸುವುದು ಕಷ್ಟಕರ ವಾಗಿದ್ದು 390 ಲೀ ಇರುವ 10 ವೆಂಟಿಲೇ ಟರ್‌ಗಳು ಮತ್ತು 50 ಹೊಸ ಹಾಸಿಗೆಗಳ ಸಾಮರ್ಥ್ಯ ಇರುವ 1 ಆಮ್ಲಜನಕ ಉತ್ಪಾದನಾ ಘಟಕ ಅವಶ್ಯಕವಾಗಿದ್ದು, ದೂರದ ಬಳ್ಳಾರಿಗೆ ಹೋಗಲು ಕನಿಷ್ಟ 3 ರಿಂದ 4 ತಾಸುಗಳ ಪ್ರಯಾಣ ದಿಂದ ರೋಗಿಗಳ ಸಾವು ಸಂಭವಿಸಬಹುದಾದ ಸಾಧ್ಯತೆ ಇರುವುದರಿಂದ ತಾಲ್ಲೂಕಿನಿಂದ 40 ಕಿ.ಮೀ. ಇರುವ ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲು ಅವಕಾಶ ನೀಡುವಂತೆ ಸಚಿವರಲ್ಲಿ ಮನವಿ ಮಾಡಿದ್ದಾರೆ.

# ಜಿಲ್ಲಾ ಕೋವಿಡ್ ಕೇಂದ್ರಕ್ಕೆ 2 ಆಮ್ಲಜನಕ ಸಾಂದ್ರಕಗಳ ವಿತರಣೆ



ದಾವಣಗೆರೆ, ಮೇ 13- ಎಸಿಬಿ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಅವರ ಸಮನ್ವಯದಲ್ಲಿ ಜಿಲ್ಲೆಯ ಕೋವಿಡ್ ಕೇಂದ್ರಕ್ಕೆ 2 ಆಮ್ಲಜನಕ ಸಾಂದ್ರತೆ ಯಂತ್ರಗಳನ್ನು ವಿತರಿಸಲಾಗಿದೆ.

ಇಂದು ನಗರದ ಇಎಸ್‌ಐ ಆಸ್ಪತ್ರೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಸಮ್ಮುಖದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ನಗರದ ಜಿಲ್ಲಾ ಕೋವಿಡ್ ಕೇರ್ ಕೇಂದ್ರಕ್ಕೆ 2 ಆಮ್ಲಜನಕ ಸಾಂದ್ರತೆ ಯಂತ್ರಗಳನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಸದ ಡಾ. ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಡಿಹೆಚ್‌ಓ ಡಾ. ನಾಗರಾಜ್ ಸೇರಿದಂತೆ ಇತರರು ಇದ್ದರು.

# ಲಾಕ್‌ಡೌನ್ ವೇಳೆ ಖಾತ್ರಿ ಕೆಲಸಕ್ಕೆ ಪರಿಷ್ಕೃತ ಮಾರ್ಗಸೂಚಿ

ಬೆಂಗಳೂರು, ಮೇ 13 - ಲಾಕ್ ಡೌನ್ ಸಮಯದಲ್ಲಿ ನರೇಗಾದಡಿ ಕಾರ್ಮಿಕರಿಗೆ ಕೆಲಸ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ರಾಜ್ಯದಲ್ಲಿ ಕೋವಿಡ್ ಸೋಂಕಿನ ಪ್ರಸರಣದ ಸರಪಳಿಯನ್ನು ಮುರಿಯಲು ಪರಿಷ್ಕೃತ ಮಾರ್ಗಸೂಚಿಗಳಿಗೆ ಒಂದು ಅನುಬಂಧವನ್ನು ಸಹ ಸರ್ಕಾರ ಬಿಡುಗಡೆ ಮಾಡಿದೆ.

ನರೇಗಾದಡಿ ಕೆಲಸ ಮಾಡಲು ಅವಕಾಶ ನೀಡಲಾಗಿದೆ. ಕೋವಿಡ್ ಮಾರ್ಗಸೂಚಿಗಳೊಂದಿಗೆ ಕೆಲಸ ಮಾಡುವ ಸ್ಥಳದಲ್ಲಿ 40ಕ್ಕಿಂತ ಹೆಚ್ಚು ಜನರು ಸೇರದಂತೆ ಸರ್ಕಾರ ಸೂಚಿಸಿದೆ ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ತಿಳಿಸಿದ್ದಾರೆ.

# ಹೋಮ್ ಐಸೋಲೇಷನ್ : ಮನೆ ಬಾಗಿಲಿಗೆ ಮೆಡಿಕಲ್ ಕಿಟ್

ಬೆಂಗಳೂರು, ಮೇ 13 - ಕೋವಿಡ್ ಸೋಂಕಿಗೆ ತುತ್ತಾದವರು ಹೋಮ್ ಐಸೋಲೇಷನ್ ಆದ ಒಂದು ಗಂಟೆಯೊಳಗೇ ಅವರ ಮನೆಗೇ ಮೆಡಿಕಲ್ ಕಿಟ್ ತಲುಪಿಸಲಾಗುವುದು ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಗುರುವಾರ ಅಧಿಕಾರಿಗಳ ಸಭೆ ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ಅವರು, ರಾಜ್ಯದಲ್ಲಿ ಕಿಟ್‌ಗಳಿಗೆ ಹೆಚ್ಚು ಬೇಡಿಕೆ ಇದೆ. ಹೀಗಾಗಿ ತಕ್ಷಣವೇ 5 ಲಕ್ಷ ಮೆಡಿಕಲ್ ಕಿಟ್‌ಗಳನ್ನು ಖರೀದಿ ಮಾಡಲು ಸರಕಾರ ನಿರ್ಧರಿಸಿದೆ. ಅಗತ್ಯಬಿದ್ದರೆ ಇನ್ನೂ ಹೆಚ್ಚಿನ ಕಿಟ್ ಖರೀದಿ ಮಾಡಲಾಗುವುದು ಎಂದರು.

ಮನೆಗಳಲ್ಲಿಯೇ ಕ್ವಾರಂಟೈನ್ ಆಗಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಯಾವುದೇ ತೊಂದರೆ ಆಗದಂತೆ ಎಚ್ಚರ ವಹಿಸಲಾಗಿದೆ.

ಈ ಮೆಡಿಕಲ್ ಕಿಟ್‌ನಲ್ಲಿ ರೋಗ ಮತ್ತು ಸೋಂಕು ನಿರೋಧಕ ಔಷಧಗಳು, ವೈರಸ್ ನಿರೋಧಕ ವಿಟಮಿನ್ ಟ್ಯಾಬ್ಲೆಟ್ ಸೇರಿದಂತೆ ರೋಗ ಉಲ್ಬಣವಾಗುವುದನ್ನು ತಡೆಯುವ ಎಲ್ಲ ಔಷಧಗಳೂ ಇರುತ್ತವೆ.

ಜತೆಗೆ, ಸೋಂಕಿತರಿಗೆ ಅತ್ಯಗತ್ಯವಾಗಿ ಬೇಕಾಗಿರುವ ಕಾಲ್ಪಿಸಿನ್ ಮಾತ್ರೆಯೂ ಇರುತ್ತದೆ. 10 ದಿನಕ್ಕೆ ಆಗುವಷ್ಟು ಔಷಧಿ ಕಿಟ್‌ನಲ್ಲಿ ಇರುತ್ತದೆ. ಜತೆಗೆ ಟೆಲಿ ಕನ್ಸಲ್ಟೆನ್ಸಿ ಸೌಲಭ್ಯವೂ ಇರುತ್ತದೆ ಎಂದವರು ಹೇಳಿದರು.

# ಜ್ಯೋತಿ ಜಗವ ಬೆಳಗೇ ಬಸವನ

ಎತ್ತೆತ್ತ ನೋಡಿದೊಡೆ ಅತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದರೆ ಭಕ್ತಿ ಎಂಬ ರಸವಯ್ಯ.

ಬಸವಣ್ಣನೇ ತಾಯಿ, ಬಸವಣ್ಣನೇ ತಂದೆ, ಬಸವಣ್ಣನೇ ಪರಮ ಬಂಧು ಎನಗೆ, ವಸುಧೀಶ ಕಪಿಲ ಸಿದ್ಧ ಶ್ರೀ ಮಲ್ಲಿನಾಥಯ್ಯ ನಿಮ್ಮ ಹೆಸರಿಟ್ಟ ಪರಮ ಗುರು ಬಸವಣ್ಣನಯ್ಯ.

ಅಕ್ಷಯ ತೃತೀಯ ರೋಹಿಣಿ ನಕ್ಷತ್ರದಂದು ಅಜ್ಞಾನದ ಅಂಧಕಾರದಲ್ಲಿ ತೊಳಲಾಡುತ್ತಿದ್ದವರನ್ನು ಉದ್ಧರಿಸಲು ಭುವಿಗೆ ಉದಯಿಸಿದವರು ಬಸವಣ್ಣನವರು.

"ಬಸವಣ್ಣನವರ ಜಯಂತಿಯನ್ನು" ಪ್ರಪ್ರಥಮವಾಗಿ ಆಚರಣೆಗೆ ತಂದ ಕೀರ್ತಿ ದಾವಣಗೆರೆಯ ವಿರಕ್ತಮಠಕ್ಕೆ ಸೇರುತ್ತದೆ.

1912 ರಂದು ದಾವಣಗೆರೆಯ ವಿರಕ್ತಮಠಾಧ್ಯಕ್ಷರಾಗಿದ್ದ ಪೂಜ್ಯ ಶ್ರೀ ಮ.ನಿ.ಪ್ರ. ಮೃತ್ಯುಂಜಯ ಅಪ್ಪಗಳವರು, ಕರ್ನಾಟಕದ ಗಾಂಧಿ ಹರ್ಡೇಕರ್ ಮಂಜಪ್ಪನವರ ಪ್ರೇರಣೆಯಿಂದಾಗಿ, ಶೂನ್ಯ ಪೀಠಾಧ್ಯಕ್ಷರಾದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಪ್ಪಣೆ ಮೇರೆಗೆ ಪ್ರಾರಂಭಿಸಲಾಯಿತು.

ಅಂದಿನಿಂದ ಇಂದಿನವರೆಗೆ ಕರ್ನಾಟಕ, ಭಾರತ ಹಾಗೂ ದೇಶ-ವಿದೇಶಗಳಲ್ಲಿ ಅವರ ಜಯಂತ್ಯೋತ್ಸವವನ್ನು ಹೆಚ್ಚು ಹೆಚ್ಚು ಔಚಿತ್ಯಪೂರ್ಣವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.




ಬಸವಣ್ಣನವರನ್ನು ಕುರಿತು ಕನ್ನಡದಲ್ಲಿ ರಚನೆಯಾದಷ್ಟು ಗ್ರಂಥಗಳು ಮತ್ತಾವ ಧಾರ್ಮಿಕ ಪುರುಷರ ಮೇಲೆ ರಚಿತವಾದಂತೆ ಕಾಣುವುದಿಲ್ಲ ಎಂಬುದು ಅತಿಶಯೋಕ್ತಿಯ ಮಾತಲ್ಲ. ಅವರೇ ರಚಿಸಿದ ವಚನಗಳು ಸಿಹಿರಸದಿಂದ ತುಂಬಿಕೊಂಡಿವೆ. ಅವುಗಳನ್ನು ಅಭ್ಯಸಿಸಿದವರ ಹೃದಯವನ್ನು ಹಸನುಗೊಳಿಸುವುದರ ಜೊತೆಗೆ ಸಾಹಿತ್ಯ ರಚನೆಗೆ ಪ್ರೇರಣೆ ನೀಡುತ್ತವೆ. ತಲೆ ತಲಾಂತರದಿಂದ, ಶತ ಶತಮಾನಗಳಿಂದ ಅವು ಸ್ಫೂರ್ತಿಯ ಸೆಲೆಯಾಗಿ, ಸಾಹಿತ್ಯ ಸಮೃದ್ಧಿಯಾಗಿ ಹುಟ್ಟಿ ಬೆಳೆಯಲು ಸಹಕಾರಿಯಾಗಿವೆ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಸಾಧನೆಯನ್ನು ಮೆಚ್ಚಿ ನಾಡು, ಹೊರನಾಡು, ದೇಶ, ವಿದೇಶಗಳಿಂದ ಅದೆಷ್ಟೋ ಜನರು ಕಲ್ಯಾಣ ನಾಡಿಗೆ ಧಾವಿಸಿ ಬಂದು ಶಿವಶರಣರೊಂದಿಗೆ "ಅನುಭವ ಮಂಟಪದ ವೇದಿಕೆಯಲ್ಲಿ" ಆಸೀನರಾಗಿ, ಅನೇಕ ವಚನಗಳನ್ನು ರಚಿಸಿದರು. ಅದರಲ್ಲಿ ಪ್ರಮುಖರಾದವರು ಅಲ್ಲಮ ಪ್ರಭುದೇವರು, ಚನ್ನಬಸವಣ್ಣನವರು, ಸಿದ್ಧರಾಮೇಶ್ವರರು, ಅಕ್ಕಮಹಾದೇವಿಯವರು, ಆಯ್ದಕ್ಕಿ ಲಕ್ಕಮ್ಮನವರು, ಶರಣೆ ಸತ್ಯಕ್ಕ ಇತ್ಯಾದಿ.

ಇಪ್ಪತ್ತೊಂದನೆ ಶತಮಾನದಲ್ಲಿ ಬಸವಣ್ಣನವರು ಬೋಧಿಸಿದ್ದ ತತ್ವಗಳನ್ನು ಗಾಳಿಗೆ ತೂರಿ, ಬಸವಣ್ಣ ಭಾಷಣದ ಸರಕಾಗಿ, ವೇದಿಕೆ ಮೇಲೆ ವಿರಾಜಿಸುವವರಾಗಿರುವುದು ದುರದೃಷ್ಟ.

ಇಡೀ ವಿಶ್ವವೇ ಬಸವ ಪಥದತ್ತ, ಬಸವ ತತ್ವದತ್ತ ಮುಖ ಮಾಡುತ್ತಿರುವಾಗ, "ಹಿತ್ತಲಗಿಡ ಮದ್ದಲ್ಲ" ಎಂಬಂತೆ ವರ್ತಿಸುವ ನಮ್ಮ ಮನೋಭಾವ ಬಸವಣ್ಣ ಮೆಚ್ಚುವಂತ ವಗತನವ ಮಾಡುವ ಸಂಸ್ಕೃತಿಯಲ್ಲ.

ಇಂದಿನ ಎಲ್ಲಾ ಸಮಸ್ಯೆಗಳಿಗೂ ವಚನಗಳಲ್ಲಿ ಪರಿಹಾರವಿದೆ. ಅದನ್ನು ಹೆಕ್ಕಿ ತೆಗೆಯುವ, ಹೊಕ್ಕು ನೋಡುವ, ಮಿಕ್ಕಿ ಪ್ರಸಾರ ಮಾಡುವ ಬಸವ ದಂಡು ಗಲ್ಲಿ ಗಲ್ಲಿಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ, ನಗರ ನಗರಗಳಲ್ಲಿ, ನಾಡು ನಾಡಿನಲ್ಲಿ, ದೇಶ ವಿದೇಶಗಳಲ್ಲಿ ಅವತರಿಸಿದರೆ "ಕಲ್ಯಾಣ ರಾಜ್ಯ" ಆಗುವುದರಲ್ಲಿ ಯಾವುದೇ ಸಂಶಯವಿಲ್ಲ.



- ಎಂ.ಕೆ. ಬಕ್ಕಪ್ಪ, ದಾವಣಗೆರೆ.

## ಕೊರೊನಾ ಕರಿನೆರಳಿನಲ್ಲಿ ಮೀನಾ ಬಜಾರ್


# ನಮ್ಮ ಜೀವನ 'ಕಭೀ ಖುಷಿ, ಕಭೀ ಗಮ್'

ಬಿ. ಸಿಕಂದರ್

ದಾವಣಗೆರೆ, ಮೇ 13- ಸುಮಾರು ಲಕ್ಷಗಟ್ಟಲೆ ಬಂಡವಾಳ ಹಾಕಿ ಬಟ್ಟೆ, ಶ್ಯಾವಿಗೆ, ಮೆಹಂದಿ, ಸೇಂಟ್ ಸೇರಿದಂತೆ ಆಹಾರ ಸಾಮಗ್ರಿಗಳು ಖರೀದಿಸಿದ್ದು ಆಯ್ತು. ಈಗ ಮಾರುಕಟ್ಟೆಯಲ್ಲಿ ವ್ಯವಹಾರ ಶುರು ಮಾಡುವ ಶುಭ ಸಂದರ್ಭದಲ್ಲಿ ಕೊರೊನಾ ಕರಿನೆರಳು ನಮ್ಮನ್ನೆಲ್ಲ ಆವರಿಸಿತು. ಒಂದೆಡೆ ಸಾಲ ಮರು ಪಾವತಿಯ ಭಯ, ಮತ್ತೊಂದೆಡೆ ಜೀವನ ಸಾಗಿಸುವ ಪ್ರಶ್ನೆ. ಹೀಗಾಗಿ ನಮ್ಮ ಜಿಂದಗಿ ಕಭೀ ಖುಷಿ, ಕಭೀ ಗಮ್ ಆಗಿ ಪರಿಣಮಿಸಿದೆ ಎನ್ನುತ್ತಾರೆ ಶ್ಯಾವಿಗೆ ವ್ಯಾಪಾರಿ ಶಂಶಾದ್ ಬೇಗಂ.

ಅಲ್ಪಸಂಖ್ಯಾತರ ಹೆಡ್ ಕ್ವಾರ್ಟರ್ ಎಂದೇ ಬಿಂಬಿತವಾಗಿರುವ ಆಜಾದ್‌ನಗರ, ಭಾಷ ನಗರ, ಮಹಬೂಬ್‌ನಗರ ಸೇರಿದಂತೆ ಆಜುಬಾಜಿನ ಪ್ರದೇಶಗಳಲ್ಲಿನ ನಿವಾಸಿಗಳು ರಂಜಾನ್ ಅಂಗವಾಗಿ ನಡೆಯುವ ಒಂದು ತಿಂಗಳ 'ಮೀನಾ ಬಜಾರ್' ವ್ಯಾಪಾರಿಗಳಾಗಿರುವ ಇವರು, ಒಬ್ಬರು ಒಂದೊಂದು ರೀತಿಯ ಸಮಸ್ಯೆಯ ಸುಳಿಯಲ್ಲಿ ಸಿಲುಕಿದ್ದು ಸದ್ಯ ದಡ ಸೇರುವುದು ಕಷ್ಟಕರವಾಗಿದೆ.

ಕಳೆದ ವರ್ಷ ಬೀಸಿದ ಬಿರುಗಾಳಿಗೆ ತತ್ತರಿಸಿದ ನಾವುಗಳು ಜನವರಿ ಹಂತಕ್ಕೆ ಹೊಸ ಕನಸಿನೊಂದಿಗೆ ಹೆಜ್ಜೆ ಇಟ್ಟಿವೆ. ಫೆಬ್ರವರಿ ಸ್ವಲ್ಪ ಸಮಾಧಾನ ನೀಡಿತ್ತಾದರೂ ಏಪ್ರಿಲ್ ತಿಂಗಳಲ್ಲಿ ಮತ್ತೆ ಸಿಡಿಲು ಬಡಿದಂತಹ ಘಾಸಿಯಾಯಿತು ಎಂದು ನೋವುಗಳನ್ನು ಹೇಳಿಕೊಂಡ ಸ್ಥಳೀಯ ವ್ಯಾಪಾರಿಗಳಾದ ಇವರು ಹಾಕಿದ ಬಂಡವಾಳ ತೆಗೆಯುವುದೇ ಕಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ಪರಿಸ್ಥಿತಿ ಏನಾಗಿರಬಹುದು ನೀವೇ ಊಹಿಸಿ? ಎಂದು ಪ್ರಶ್ನೆ ಮಾಡಿದ ಬಟ್ಟೆ ವ್ಯಾಪಾರಿ ಮಖ್ಬೂಲ್ ಸಾಬ್ ಅವರು, ಕಳೆದ



ವರ್ಷ ಮಾಡಿದ ಸಾಲ ಇನ್ನೂ ನಾನು ತೀರಿಸಲು ಸಾಧ್ಯವೇ ಆಗಿಲ್ಲ. ಹೀಗಾಗಿ ಮತ್ತೆ ಗಾಯದ ಮೇಲೆ ಬರೆ ಎಂಬಂತೆ ಪ್ರಕೃತಿ ನಮ್ಮ ಮೇಲೆ ಪರೀಕ್ಷೆ ಮಾಡುತ್ತಿದೆ ಎಂದು ಕಣ್ಣಂಚಿನಿಂದ ಕಂಬನಿ ಉದುರಿಸಿದರು.

ಬಡವರಿಗೆ ವರದಾನವಾಗಿದ್ದ ಈ ಪ್ರದೇಶದಲ್ಲಿನ ರಂಜಾನ್ ಬಜಾರ್ ಅಥವಾ 'ಮೀನಾ ಬಜಾರ್'ಗೆ ಕಳೆದ ಎರಡು ವರ್ಷಗಳಿಂದಲೂ ಮಂಕು ಕವಿದಿದೆ. ಕಳೆದ ವರ್ಷ ಪರಿಸ್ಥಿತಿ ಬಹಳ ಗಂಭೀರತೆಯಿಂದ ಕೂಡಿತ್ತು. ಮಕ್ಕಳಿಗೆ ಸಮಜಾಯಿಷಿ ನೀಡಿ ಹಬ್ಬ ಆಚರಿಸಿದ್ದೇವೆ. ಆದರೆ ದೇಶದಲ್ಲಿ ನೋವಿನ ಸುದ್ದಿಗಳು ಕೇಳಿ ಬರುತ್ತಿರುವ ಇಂತಹ ಸಂದರ್ಭದಲ್ಲಿ ಸಡಗರವಿಲ್ಲದಿದ್ದರೂ, ಸರಳ ರೀತಿಯಲ್ಲಿ ಹಬ್ಬ ಆಚರಿಸೋಣವೆಂದರೆ ಆರ್ಥಿಕ ಮುಗ್ಗಟ್ಟು, ಇವೆಲ್ಲ ಸುಧಾರಿಸಿಕೊಳ್ಳೋಣ ಎಂದರೆ 'ಲಾಕ್‌ಡೌನ್'. ಕೆಲಸ ಕಾರ್ಯಗಳಿಲ್ಲದೆ ದಿನದ ಮನೆಯ ಖರ್ಚು ಕೈ ತಪ್ಪಿ ಹೋಗುತ್ತಿದೆ ಎಂದು ವಿವರಿಸಿದ ಷಬ್ಬೀರ್ ಅಹ್ಮದ್ ಅವರು ಸರ್ಕಾರ ಸ್ವಲ್ಪ 'ರಿಲ್ಯಾಕ್ಸೇಷನ್' ನೀಡಿದ್ದರೆ ಹೇಗಾದರೂ ಮಾಡಿ ಜೀವನ ರೂಪಿಸಿಕೊಳ್ಳುತ್ತಿದ್ದೆವು ಎನ್ನುತ್ತಾರೆ.

ಬೆಳಿಗ್ಗೆ ಎದ್ದರೂ ಪೊಲೀಸ್ ಇಲಾಖೆಯ ಎಚ್ಚರಿಕೆ (ಧ್ವನಿವರ್ಧಕದಲ್ಲಿ) ಗಂಟೆ, ಸಾಯಂಕಾಲವಾಗುತ್ತಿದ್ದಂತೆ ರೋಜಾ ಬಿಡುವ ಸಮಯದಲ್ಲೂ ಪೊಲೀಸ್ ಬಂದೋಬಸ್ತ್ ಬಿಟ್ಟರೆ ಊರಿನಲ್ಲಿ ಓಡಾಟವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಹೊಸಬಟ್ಟೆ ಇಲ್ಲ, ಕುಟುಂಬ ಸದಸ್ಯರಿಗೆ ಹಬ್ಬದ ಸಂತೋಷವಿಲ್ಲ. ಸಂದಿಗ್ಧ ಸ್ಥಿತಿಯಲ್ಲಿ ದಿನ ಕಳೆಯುತ್ತಿರುವ ನಮಗೆ ಆ ಭಗವಂತನೇ ಕಾಪಾಡಬೇಕು ಎನ್ನುತ್ತಾರೆ ಇಸ್ಮಾಯಿಲ್ ಸಾಬ್ ಅವರು.

ಒಟ್ಟಾರೆ ಏನೇ ಆಗಲಿ ರಂಜಾನ್ ಹಬ್ಬದ ಮೆರಗು ನೀಡುವ 'ಮೀನಾ ಬಜಾರ್' ಮಿಂಚು, ಕಳೆದ ಎರಡು ವರ್ಷಗಳಿಂದ ಕಣ್ಮರೆಯಾಗಿದ್ದು ಈ ಭಾಗದ ಜನರಿಗೆ ತುಂಬಲಾರದಷ್ಟು ನಷ್ಟ ಅನುಭವಿಸಬೇಕಾದಂತಹ ದುಃಸ್ಥಿತಿಯನ್ನು ತಂದೊಡ್ಡಿ ಬಡಜನತೆಗೆ ಶಾಪವಾಗಿದೆ.

ಅಷ್ಟೇ ಅಲ್ಲದೆ ಕೊರೊನಾ ಮಹಾಮಾರಿಯ ಆರ್ಭಟಕ್ಕೆ ತತ್ತರಿಸಿರುವ ದೇಶದ ಜನತೆಯ ನೋವಿನಲ್ಲಿ ಸಂಭ್ರಮ ಸಮಂಜಸವಲ್ಲ ಎಂಬ ನಿರ್ಣಯ ತೆಗೆದುಕೊಂಡಿರುವ ಮುಸ್ಲಿಂ ಬಾಂಧವರು ಈ ಬಾರಿಯೂ ಸಹ ಸರಳ ರಂಜಾನ್ ಆಚರಣೆಗೆ ಮುಂದಾಗಿದ್ದಾರೆ.

# ಸಿರಿಗೆರೆ ಸಾಮೂಹಿಕ ಕಲ್ಯಾಣ ಮಹೋತ್ಸವಕ್ಕೀಗ 60 ವರ್ಷ

ಹಿಂದಿನ ಕಾಲದಲ್ಲಿ ಈ ಮಾತು ಬಹಳ ಪ್ರಚಲಿತದಲ್ಲಿತ್ತು- 'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು'. ಜೊತೆಗೆ ಒಂದು ಮದುವೆ ಮಾಡಬೇಕಾದರೆ ಏಳು ಜೊತೆ ಚಪ್ಪಲಿಗಳು ಸವೆದು ಹೋಗುತ್ತಿದ್ದವು. ಈಗ ಇದರ ರೂಪ ಬದಲಾಗಿದೆ. ಏಳು ಜೊತೆ ಚಪ್ಪಲಿಗಳನ್ನು ಕೊಳ್ಳುವ ದುಪ್ಪಟ್ಟು ಹಣ ಖರ್ಚು ಮಾಡಿ ಓಡಾಡಿದರೂ ಗಂಡು - ಹೆಣ್ಣು ಹೊಂದಾಣಿಕೆ ಮಾಡುವುದು ಕಷ್ಟವಾಗಿದೆ. ಈಗ ಮದುವೆ ಮಾಡಿಸುವ ದಲ್ಲಾಳಿಗಳಿಗೆ ದುಡ್ಡು (ಕಮೀಷನ್) ಕೊಟ್ಟೆ ಸಾಕಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದೆಲ್ಲದರ ಜೊತೆಗೆ ಮದುವೆ ಎಂದರೆ ಆಡಂಬರ. ತನ್ನ ಶ್ರೀಮಂತಿಕೆಯನ್ನು ಪ್ರದರ್ಶನಕ್ಕಿಡುವ ಮಾಧ್ಯಮವಾಗಿದೆ. ಅದರೆ, ಕಳೆದ ಒಂದು ವರ್ಷದಿಂದ ಕೊರೊನ e ರೋಗ ಆವರಿಸಿ, ಈ ಅದ್ಧೂರಿ ಮದುವೆಗಳಿಗೆ ಕಡಿವಾಣ ಹಾಕಿದಂತಾಗಿದೆ.

'ವಿವಾಹ' ಎಂಬ ಶಬ್ದದ ಅರ್ಥ 'ವಿಶೇಷಣ ವಾಹ'. ಅಂದರೆ ಗಂಡು ಹೆಣ್ಣಿಗೆ ಹೆಚ್ಚಿನ ಜವಾಬ್ದಾರಿ ಹೊರುವುದು. ಇನ್ನೂ ಕೆಲವರು ಈ ಮದುವೆ ಎಂಬ ಶಬ್ದಕ್ಕೆ 'ಕಲ್ಯಾಣ' ಎಂಬ ಪದವನ್ನು ಬಳಸುತ್ತಾರೆ. ಕಲ್ಯಾಣ ಎಂದರೆ ಬಸವಾದಿ ಶಿವ ಶರಣರ ಅಭಿಪ್ರಾಯದಲ್ಲಿ ಶುಭ, ಮಂಗಳ ಎಂಬ ಅರ್ಥವೂ ಬರುತ್ತದೆ. ಜೀವನದಲ್ಲಿ ಈ ಮದುವೆ ಎಂಬುದು ಗಂಡು ಹೆಣ್ಣುಗಳಿಗೆ ಒಂದು ಪರಿಪೂರ್ಣತ್ವವನ್ನು ತಂದು ಕೊಡುವ ಘಟ್ಟ. ಶಾಸ್ತ್ರಜ್ಞರ ಪ್ರಕಾರ ಮನುಷ್ಯ ಹುಟ್ಟಿನಿಂದ ಸಾಯುವವರೆಗೆ ಒಟ್ಟು ಹದಿನಾರು ಸಂಸ್ಕಾರಗಳನ್ನು ಪೂರೈಸಬೇಕಾಗುತ್ತದೆ. ನಾಮಕರಣ ದಿಂದ ಅಂತ್ಯಸಂಸ್ಕಾರದವರೆಗೆ ಈ ಸಂಸ್ಕಾರಗಳಿಂದ ಮನುಷ್ಯನ ಜೀವನ ಅಂತ್ಯವಾಗುತ್ತದೆ. ಇದರಲ್ಲಿ ವಿವಾಹ ಸಂಸ್ಕಾರಕ್ಕೆ ಬಹಳಷ್ಟು ಮಹತ್ವವಿದೆ. ಏಕೆಂದರೆ ಇಲ್ಲಿ ಎರಡು ಬೇರೆ ಬೇರೆ ಜೀವಿಗಳು ಕೂಡಿ ಬಾಳ ಬೇಕಾಗುತ್ತದೆ. ಅದಕ್ಕಾಗಿ ಅವರಿಬ್ಬರಲ್ಲಿ ಹೊಂದಾಣಿಕೆಗೆ ಒತ್ತು ಕೊಡಬೇಕಾಗುತ್ತದೆ. ಹೊಂದಾಣಿಕೆ ಇಲ್ಲದಿದ್ದರೆ, ವೈವಾಹಿಕ ಜೀವನ ಸರಿದಾರಿಯಲ್ಲಿ ಸಾಗಲು ಸಾಧ್ಯವಾಗುವುದಿಲ್ಲ.

ಮದುವೆಗಳಲ್ಲಿ ಜನ ಸೇರುವುದು, ಹರಟೆ ಒಡೆಯುವುದು, ಇನ್ನೂ ಕೆಲವು ಕಡೆ ಬಿಡದಿ ಮನೆಗಳಲ್ಲಿ ಇಸ್ಪೀಟ್ (ಇದಕ್ಕೆ ಭಜನೆ ಮಾಡುವುದು ಎಂಬ ವ್ಯಂಗ್ಯವೂ ಉಂಟು) ಆಟವಾಡಿ ಕಾಲ ಕಳೆಯುವುದು ಮುಂತಾದ ಚಟುವಟಿಕೆಗಳು ನಡೆಯುತ್ತಿದ್ದವು. ಮತ್ತೆ ಕೆಲವರು ಉಳ್ಳವರು ನೃತ್ಯ, ಸಂಗೀತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ, ಕಾಲಾಪರಣಕ್ಕೆ ಅವಕಾಶ ಮಾಡಿಕೊಡುತಿದ್ದರು. ಹೀಗಾಗಿ ಅನವಶ್ಯಕವಾಗಿ ಹಣ ವ್ಯಯವಾಗುತ್ತಿತ್ತು.



ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಪರಮ ಪೂಜ್ಯ ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶರಾಗಿದ್ದ ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಮದುವೆ ಸಮಾರಂಭಗಳಿಗೆ ಶಿಷ್ಯರು ಬಂದು ಆಹ್ವಾನಿಸಿದಾಗ "ಅಲ್ಲಿ ಸಭೆ ಏರ್ಪಾಡು ಮಾಡುವುದಾದರೆ ಬರುತ್ತೇವೆ" ಎಂದು ತಿಳಿಸುತ್ತಿದ್ದರು. ಅಂತಹ ಕಡೆ ಹೋದಾಗ 'ಶರಣ ಸಮ್ಮೇಳನ' ಎಂಬ ಹೊಸ ಕಾರ್ಯಕ್ರಮಕ್ಕೆ ನಾಂದಿ ಹಾಡಿದರು. ಆಗ ಆ ಸಭೆಯಲ್ಲಿ ಆಗಮಿಸಿದ ಬಂಧು-ಮಿತ್ರರು ಮತ್ತು ವಧು-ವರರಿಗೆ ಕೆಲವು ಹಿತ ನುಡಿಗಳನ್ನು ಹೇಳಿಸುವುದರೊಂದಿಗೆ ವ್ಯರ್ಥವಾಗಿ ಕಾಲ ಹರಣ ಮಾಡದೆ, ಜ್ಞಾನ ದಾಸೋಹ ಬಿತ್ತರಿಸುವ ಕೆಲಸ ಶುರು ಮಾಡಿದರು. ಈ ರೀತಿ ಆಲೋಚನಾ ಕ್ರಮದಿಂದ ಮದುವೆಗಳಿಗೆ ಮಾಡುವ ದುಂದು ವೆಚ್ಚವನ್ನು ಕಡಿಮೆ ಮಾಡಲು ಮುಂದಾಗಿ ಸಾಮೂಹಿಕ ಕಲ್ಯಾಣ ಮಹೋತ್ಸವದ ವ್ಯವಸ್ಥೆಯನ್ನು ಜಾರಿಗೆ ತಂದರು. ಶಾಲಿವಾನ ಶಕೆ 1883ನೇ ಪ್ಲವ ನಾಮ ಸಂವತ್ಸರ ವೈಶಾಖ ಶುದ್ಧ ಅಕ್ಷಯ ತದಿಗೆ ಅಂದರೆ 18-4-1961ರ ಮಂಗಳವಾರ ಬಸವ ಜಯಂತಿಯೆಂದು ಮೊಟ್ಟ ಮೊದಲ ಬಾರಿಗೆ ಸಿರಿಗೆರೆಯಲ್ಲಿ ಪ್ರಾರಂಭ ಮಾಡುತ್ತಾರೆ. ಆಗ ಇದರಲ್ಲಿ ಹತ್ತು ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಡುತ್ತಾರೆ. ಆಗಿನ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದ ಎಂ ಗಂಗಾಧರಯ್ಯನವರು ಇದೇ ಸಾಮೂಹಿಕ ಮದುವೆಯಲ್ಲಿ ಪಾರಮ್ಮನೊಂದಿಗೆ ಮದುವೆ ಮಾಡಿಕೊಳ್ಳುತ್ತಾರೆ. ಇವರ ಜೊತೆಗೆ ಶಾರದಮ್ಮ-ಸಿದ್ಧಯ್ಯ (ನಲ್ಕುಂದ), ಕಮಲಮ್ಮ-ಬಸವಂತಯ್ಯ (ಸಿರಿಗೆರೆ), ಸುಲೋಚನಮ್ಮ-ಶರಣಪ್ಪ (ಸಿರಿಗೆರೆ), ವಿಶಾಲಮ್ಮ-ರೇವಪ್ಪ (ಸಿರಿಗೆರೆ), ಸಿದ್ಧಮ್ಮ-ಸಿದ್ಧಯ್ಯ(ಸಿರಿಗೆರೆ), ಸುಶೀಲಮ್ಮ-ಮಲ್ಲೇಶಪ್ಪ(ಕೊಳಹಾಳ್), ಗಿರಿಜಮ್ಮ-ವಿಶ್ವನಾಥ್ (ಬಿ.ದುರ್ಗ), ಮಲ್ಲಮ್ಮ-ಶಿವಕುಮಾರ್ (ಚಿಕ್ಕಬೆನ್ನೂರು), ಸುಶೀಲಮ್ಮ-ಕಲ್ಲೇಶ್ (ಸಾದರಹಳ್ಳಿ) ಇವರು ದಾಂಪತ್ಯ ದೀಕ್ಷೆ ಪಡೆದರು. ಪ್ರಪ್ರಥಮ ಈ ಸಾಮೂಹಿಕ ಕಲ್ಯಾಣ ಮಹೋತ್ಸವವು ಶ್ರೀ ಬೃಹನ್ಮಠದ ಮುಂಭಾಗದ ( ಈಗಿನ ಆಡಳಿತ ಕಛೇರಿ ಕಟ್ಟಡದ ಸ್ಥಳ) ಭವ್ಯವಾದ ಮಂಟಪದಲ್ಲಿ ಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ನೆರವೇರಿತು. ಹಿಂದಿನ ಈ ಶುಭ ದಿನದಂದು ವಿವಾಹ ಬಂಧನಕ್ಕೆ ಒಳಗಾದ ನೀವೆಲ್ಲರೂ 'ಸತಿಪತಿಗಳೊಂದಾದ ಭಕ್ತಿ



ಹಿತವಾಗಿಪ್ಪುದು ಶಿವಗಂಗೆ' ಶಿವಶರಣರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು, ಒಳ್ಳೆಯ ಜೀವನವನ್ನು ನಡೆಸಿ, ಸಕಲರಿಗೂ ಮಾರ್ಗದರ್ಶಕರಾಗುವ ರೀತಿಯಲ್ಲಿ ಬಾಳಿ, ಅಕ್ಕನ ನುಡಿಯಂತೆ, 'ನಿಮ್ಮ ಮಂಡೆಗೆ ಹೂವ ತರುವನಲ್ಲದೆ ಹುಲ್ಲ ತಾರೆನು ಎಂಬ ಮಾತನ್ನು ನೆನಪಿನಲ್ಲಿಟ್ಟುಕೊಂಡು ಜೀವನದಲ್ಲಿ ಯಶಸ್ವಿಯಾಗಲೆಂದು ನಾವು ಮನಸಾರೆ ಹರಸಿ, ಆಶೀರ್ವದಿಸುತ್ತಿದ್ದೇವೆ'. ಎಂದು ಪೂಜ್ಯರು ಆಶೀರ್ವಚನ ದಯಪಾಲಿಸಿದ್ದರು.

ಈ ಎಲ್ಲಾ ಜೋಡಿಗಳಿಗೂ ಕಲ್ಯಾಣ ಮಹೋತ್ಸವಕ್ಕಿಂತ ಮುಂಚೆ ಪೂಜ್ಯರು 'ಲಿಂಗಾಂಗ ಸಾಮರಸ್ಯದ ಕುರುಹಾಗಿ ಲಿಂಗ ದೀಕ್ಷೆ ನೀಡಿ ಆಶೀರ್ವದಿಸಿರುತ್ತಾರೆ. ಈ ಸಾಮೂಹಿಕ ಕಲ್ಯಾಣ ಮಹೋತ್ಸವವು ವಿಶಾಲ ಕರ್ನಾಟಕದಲ್ಲಿ ಪ್ರಾರಂಭವಾದ ಮೊಟ್ಟ ಮೊದಲ ಸಾಮೂಹಿಕ ಕಲ್ಯಾಣ ಮಹೋತ್ಸವ ವಾಗಿರುತ್ತದೆ. ಅಂದು ಶುರುವಾದ ಈ ಕಾರ್ಯ ಸಿರಿಗೆರೆಯಲ್ಲಿ ಇಂದಿನವರೆಗೂ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಮೊದಲು ವರ್ಷದಲ್ಲಿ ಒಂದೇ ಸಲ ನಡೆಯುತ್ತಿದ್ದ ಈ ಕಾರ್ಯಕ್ರಮವು ಜನರ ಒತ್ತಡದಿಂದಾಗಿ ಎರಡು-ಮೂರು ಸಲ ನಡೆಯುತ್ತಾ ಬಂದು ಇತ್ತೀಚಿನ ದಿನಗಳಲ್ಲಿ ಪ್ರತೀ ತಿಂಗಳು ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. ಇದರಿಂದ ಹಣದ ದುಂದು ವೆಚ್ಚಕ್ಕೆ ಕಡಿವಾಣ ಹಾಕಿದಂತಾಗಿದೆ ಮತ್ತು ಹಣದ ಅಡಚಣೆ ಇದ್ದಂತವರಿಗೆ ತುಂಬಾ ಅನುಕೂಲವಾಗಿದೆ. ಇಂತಹ ಸಾಮೂಹಿಕ ಕಲ್ಯಾಣ ಮಹೋತ್ಸವವು ಬಡವರಿಗೆ ಮಾತ್ರ ಸೀಮಿತವಾಗದೆ ಉಳ್ಳವರು ಸಹ ಇದರಲ್ಲಿ ಪಾಲ್ಗೊಂಡಿದ್ದಾರೆ ಎಂಬುದು ಈ ಮಹೋತ್ಸವದ ಹಿರಿಮೆ. ದಾವಣಗೆರೆ ಹೆಸರಾಂತ ವರ್ತಕರಾದ ಮಾಗನೂರು ಬಸಪ್ಪ ನವರು ಮತ್ತು ಬುಕ್ಕಸಾಗರದ ಮಹಲಿಂಗ ಶಾಸ್ತ್ರಿ ಮುಂತಾದ ಗಣ್ಯವ್ಯಕ್ತಿಗಳು ಸಹ ತಮ್ಮ ಮಕ್ಕಳ ಮದುವೆಗಳನ್ನು ಈ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ನೆರವೇರಿಸಿ ಆದರ್ಶ ತೋರಿದ್ದಾರೆ.

ಈಗ ಕೊರೊನಾ ಹೆಮ್ಮಾರಿಯಿಂದ ಮದುವೆಗಳಲ್ಲಿ ಜನಸಂಖ್ಯೆ ನಿರ್ಬಂಧವನ್ನು ಹೇರಿರುವುದರಿಂದ ಬಡವ - ಬಲ್ಲಿದ ಎಂಬ ಭೇದವನ್ನು ಈ ಕಾಲವೇ ನಿರ್ಣಯಿಸಿಬಿಟ್ಟಿದೆ.

**- ಡಾ. ಎಂ ಈಶ್ವರ ಶರ್ಮ,**
ವಿಶ್ರಾಂತ ಪ್ರಾಧ್ಯಾಪಕರು, 16ನೆಯ ಕ್ರಾಸ್,
ತರಳಬಾಳು ಬಡಾವಣೆ, ದಾವಣಗೆರೆ-5.

## ಈ ಪರಿಯ ಮದುವೆ

ಮದುವೆ, ಮದುವೆ, ಮದುವೆ
ವಧುವಿಗು, ವರನಿಗು ಮದುವೆ
ಸಂತಸದಲ್ಲಿ ಪತ್ರಿಕೆ ಬಂದಿತು...
ವಾಟ್ಸಾಪ್ ನಲ್ಲಿ ಪ್ರೀತಿಯ ಕರೆಯೋಲೆ!!
ಸದ್ದಿಲ್ಲದೆ ಬಂದಿತು ಕರೋನಾ ಓಡೋಡಿ
ಎಲ್ಲಾ ಕಾರ್ಯಕ್ರಮಕು ತೊಡಕಾಗಿ
ಮದುವೆ, ಸಂತಸಕೂಟ ಇನ್ನೆಲ್ಲಿ ?
'ಐವತ್ತು' ಮಂದಿಯೇ ಸಾಕಂತೆ !
ವಾದ್ಯ, ಓಲಗ,ಭಟ್ಟರು, ಪುರೋಹಿತರು
ಅವರಿವರು ಸೇರಿ ಆದರು "ಇಪ್ಪತ್ತು"
ವಧುವಿನ ಅಪ್ಪ,ಅಮ್ಮ,ಅಣ್ಣ, ತಂಗಿ
ಚಿಕ್ಕ, ಚಿಕ್ಕಿ,ಅಜ್ಜ, ಅಜ್ಜಿ,ಅತ್ತೆ,ಮಾವ
ಮತ್ತೆಲ್ಲಾ,ಜೊತೆಗೆ ವರನ ಸಾಲು ಇದೆಯಲ್ಲಾ !
ಕೂಡಿ ಸೇರಲು ಆದರು "ಇಪ್ಪತ್ತೈದು"
ವಧು, ವರನ ಗೆಳೆಯರು ಮತ್ತೈದು
ಆಗೇ ಬಿಟ್ಟಿತು ಅಲ್ಲಿಗೆ "ಐವತ್ತು"....
ಗತ್ತು,ಗೈರತ್ತು,ದೌಲತ್ತಿಲ್ಲದ ಮದುವೆ
ನಾವು- ನೀವು ಇರದ ಮದುವೆ.....
ಬಂದಿತು ನೋಡಿ ವಾಟ್ಸಾಪ್ ಮೆಸೇಜ್
ಈ ಲಿಂಕನ್ನು ಒತ್ತಿ- ಮದುವೆಯ ನೋಡಿ
ಯೂ ಟ್ಯೂಬ್ ನಲ್ಲಿ ತೂರಿ ಬಿಡಿ.....
ವಧು- ವರರನ್ನು ಮರೆಯದೆ ಹರಸಿ !!
ಈ ಪರಿಯ ಮದುವೆ ಸೊಬಗೆಲ್ಲಿ ತಿಳಿಸಿ.
ಅಯ್ಯೋ ರಾಮ! ಮುಂದೆ ಹೆಂಗಪ್ಪಾ ಶ್ಯಾಮ !!?

**- ವೀಣಾ ಕೃಷ್ಣಮೂರ್ತಿ,** ದಾವಣಗೆರೆ.

## ಭಯವ ಬಿಡಿ

ಭಯವ ಬಿಡಿ, ಭಯವ ಬಿಡಿ,
ಕೊರೊನಾ ಬಂದಿತೆಂಬ ಭಯವ ಬಿಡಿ,
ಆಂಬ್ಯುಲೆನ್ಸ್, ಆಸ್ಪತ್ರೆ, ಆಕ್ಸಿಜನ್ ಸಿಗಲಿಲ್ಲ
ಎಂಬ ಭಯವ ಬಿಡಿ.

ಕಾಡು-ಮೇಡುಗಳಲ್ಲಿ ಅಲೆದ ಪೂರ್ವಜರು
ಹೆದರಲಿಲ್ಲ,
ಯುದ್ಧ-ಮಹಾಯುದ್ದಗಳಿಗೆ ಹೆದರಲಿಲ್ಲ,
ಸ್ವಾತಂತ್ರ್ಯ-ಸಂಗ್ರಾಮಗಳಿಗೆ ಹೆದರಲಿಲ್ಲ.

ಸಿಡುಬು, ಪ್ಲೇಗ್, ಕಾಲರಾ
ರೋಗವ ಎದುರಿಸಿದೆವಲ್ಲ,
ಹಕ್ಕಿ,ಡೆಂಗಿ, ಎಬೋಲಗಳ ಎದುರಿಸಿದೆವಲ್ಲ,
ಎದುರಿಸಿ ನಿಂತೆವಲ್ಲ ಎಲ್ಲಾ ರೋಗಗಳ.

ಆಂಬ್ಯುಲೆನ್ಸ್ ಸಾಲು ನೋಡಿ ಹೆದರದಿರಿ,
ಸ್ಮಶಾನದಿ ಸುಡುವ ಶವಗಳ ನೋಡಿ ಹೆದರದಿರಿ,
ಗೋಳಿಡುವ ಸಂಬಂಧಿಗಳ ನೋಡಿ ಹೆದರದಿರಿ,
ನನಗಾರು ಎಂದು ಹೆದರದಿರಿ.

ಭಯವ ಬಿಡಿ, ಭಯವ ಬಿಡಿ,
ಮಾಸ್ಕ ಧರಿಸಿ,ಅಂತರ ಕಾಪಾಡಿಕೊಳ್ಳಿ,
ಶುಚಿಯಾಗಿರಿ, ಮನೆಯಲ್ಲೇ ಇರಿ,
ಕೊರೊನಾ ಬಂದಿತೆಂಬ ಭಯವ ಬಿಡಿ.

**- ಹೆಚ್.ಎನ್.ಶಿವಕುಮಾರ್**
ಮಾಜಿ ಸದಸ್ಯರು, ಮಹಾನಗರಪಾಲಿಕೆ
ದಾವಣಗೆರೆ.

## ಬೇಡಿಕೆ ಹೆಚ್ಚಿಸಿಕೊಂಡ ಲಸಿಕೆ

ಮೊದಲ ಅಲೆಯಲ್ಲಿ ಕೊರೊನಾ
ಅಸ್ತವ್ಯಸ್ತಗೊಳಿಸಿತ್ತು ಜಗತ್ತಿನ ಚಿತ್ರಣ
ಮನೆಯೊಳಗಿದ್ದರೆ ಸುರಕ್ಷತವೆಂಬ ಭಾವ
ಮರೆಸುತ್ತಿಲ್ಲದ ಜನರಿಗೂ ವಿರಾಮದ ಅನುಭವ

ಗಂಟೆ ಬಾರಿಸಿ,
ದೀಪ ಹಚ್ಚಿದಾಗ ಏನೋ ಭರವಸೆ
ಒಳ್ಳೆಯ ದಿನ ಬರಬಹುದೆಂಬ ನಿರೀಕ್ಷೆ
ಕಷಾಯ ಕುಡಿದು ರೋಗ ತಡೆದೆವೆಂಬ ನಂಬಿಕೆ
ವಿಜ್ಞಾನಿಗಳ ಪರಿಶ್ರಮದಿಂದ ಸಿದ್ಧಗೊಂಡಿತು
ಲಸಿಕೆ

ನಮ್ಮದೇ ಹೆಮ್ಮೆಯ ಚುಚ್ಚುಮದ್ದಿನ ಮೇಲೆ
ಅಪನಂಬಿಕೆ
ಜೀವ ಉಳಿಸುವ ಮದ್ದಿನ ಮೇಲೆ ಶಂಕೆ
ಎರಡನೇ ಅಲೆಯ ಭಾರೀ ಹೊಡೆತ
ಸರ್ವಾಂತರ್ಯಾಮಿಯಾದ ಕೊರೊನಾ ಹಿಡಿತ

ಅಜಾಗರೂಕತೆಯಿಂದ ಸ್ವಯಂಕೃತಪರಾಧ
ಹತೋಟಿಗೆ ನಿಲುಕದ ಪ್ರಮಾದ
ಮಿತಿಮೀರಿದಾಗ ಸಾವಿನ ಸಂಖ್ಯೆ
ಬದುಕಿದರೆ ಸಾಕೆಂದು ಲಸಿಕೆಗಾಗಿ ಹೆಚ್ಚುತ್ತಿದೆ
ಬೇಡಿಕೆ

**- ಅನುಪಮ ವಿರುಪಾಕ್ಷಪ್ಪ,** ದಾವಣಗೆರೆ.

## ರಾಣೇಬೆನ್ನೂರು ತಾ.ಪಂ.ಗೆ ಆಡಳಿತಾಧಿಕಾರಿ ಮುಳ್ಳಳ್ಳಿ

ರಾಣೇಬೆನ್ನೂರು, ಮೇ 13- ತಾಲ್ಲೂಕು ಪಂಚಾಯ್ತಿ ಆಡಳಿತ ಮಂಡಳಿಯ ಅಧಿಕಾರವಧಿ ಮುಗಿದಿದ್ದು, ಜಿಲ್ಲಾ ಪಂಚಾಯ್ತಿ ಉಪಕಾರ್ಯದರ್ಶಿ ಎಸ್.ಬಿ.ಮುಳ್ಳಳ್ಳಿ ಆಡಳಿತಾಧಿಕಾರಿಯಾಗಿದ್ದಾರೆ.

## ಕ್ರಾಂತಿಕಾರಿ ಬಸವಣ್ಣ

ಕಾಯಕವೇ ಕೈಲಾಸವೆಂದು ಸಾರಿ
ಜಗಜ್ಯೋತಿಯಾಗಿ ನೊಂದವರ
ಬಾಳ ಬೆಳಕಿಗೆ ನಾಂದಿ ಹಾಡಿ
ದಿಕ್ಕು ತೋರಿದ ಬಸವಣ್ಣ
ನಿನಗೆ ನನ್ನ ನಮನ !

ಜಾತಿ ಧರ್ಮವ ದೂರವಿರಿಸಿ
ಸರ್ವ ಜನಾಂಗದ ಉದಯಕ್ಕೆ
ಹಗಲಿರುಳು ಶ್ರಮಿಸಿ
ಸರ್ವರ ಏಳ್ಗೆ-ಬಾಳ್ಗೆಗೆ
ದಾರಿ ತೋರಿದ ಬಸವಣ್ಣ
ನಿನಗೆ ನನ್ನ ನಮನ !

ನಿನ್ನ ಸಾಹಿತ್ಯದ ಸಿರಿ ಅಮೋಘ
ಸರ್ವಕಾಲಕ್ಕೂ ಸರ್ವ ಕಾರ್ಯಕ್ಕೂ
ತ್ರಿಕಾಲ ಸತ್ಯ ಬೋಧಿಸಿದ
ನಿನ್ನ ವಚನ ಸಂದೇಶ
ಎಂದೆಂದಿಗೂ ಸತ್ಯ !

ಇಂದಿನ ನಾಗಾಲೋಟ ಪ್ರಪಂಚದಲಿ
ನಿನ್ನ ತತ್ವಗಳ ಸಂದೇಶ
ಅತ್ಯವಶ್ಯಕ ಹಾಗೂ ಅನಿವಾರ್ಯ
ಮನುಜಮತ ವಿಶ್ವಪಥ
ದಾರಿ ತೋರಿದ ಬಸವಣ್ಣ
ನಿನಗೆ ನನ್ನ ನಮನ


ಲೋಕ ಕಲ್ಯಾಣಕೆ
ವಿಶ್ವ ಸಂದೇಶವ ಸಾರಿ
ವಿಶ್ವಗುರು ಮಹಾ ಮಾನವತಾವಾದಿ
ನೀನಾದೆ
ದಯೆತೋರು ದಿಕ್ಕೆಟ್ಟ ಸಮಾಜಕ್ಕೆ
ಸಂಜೀವಿನಿಯಾಗಿ ಮತ್ತೊಮ್ಮೆ
ಹುಟ್ಟಿ ಬಾ ಬಸವಣ್ಣ
ನಿನಗೆ ನನ್ನ ನಮನ !

ಇಂದು ನಿನ್ನ ಜಯಂತಿಯ
ಆಚರಿಸುತ್ತಿದ್ದೇವೆ ಆದರೆ
ನಿನ್ನ ತತ್ವ-ಸಿದ್ಧಾಂತ
ಆಚರಣೆಯಲ್ಲಿ ಇಲ್ಲ
ಅದು ಯಾವಾಗ ???

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು
ದಾವಣಗೆರೆ

## ಜಿಲ್ಲಾ ಲಾರಿ ಮಾಲೀಕರಿಂದ ಲಾರಿ ಚಾಲಕರಿಗೆ ಊಟೋಪಚಾರ

ದಾವಣಗೆರೆ, ಮೇ 13- ದಾವಣಗೆರೆ ಜಿಲ್ಲಾ ಲಾರಿ ಮಾಲೀಕರ ಮತ್ತು ಟ್ರಾನ್ಸ್ ಪೋರ್ಟ್ ಏಜೆಂಟರ ಸಂಘದ ವತಿಯಿಂದ ಅಧ್ಯಕ್ಷ ಸೈಯದ್ ಸೈಫುಲ್ಲಾ ನೇತೃತ್ವದಲ್ಲಿ ರಾಷ್ಟ್ರೀಯ ಹೆದ್ದಾರಿ ಮಾರ್ಗಗಳಲ್ಲಿ ಸಂಚರಿಸುವ ಲಾರಿ ಚಾಲಕರಿಗೆ ಊಟೋಪಚಾರದ ಸೇವೆ ನೀಡುತ್ತಾ ಅವರ ಕ್ಷೇಮ ವನ್ನು ಬಯಸಲಾಗುತ್ತಿದೆ.



ಲಾಕ್ ಡೌನ್ ಆದಾಗಿನಿಂದ ಇತರೆ ಜಿಲ್ಲೆಗಳಿಗೆ ಸಂಚರಿಸುವ, ಇತರೆ ಜಿಲ್ಲೆಗಳಿಂದ ಬರುವ ಲಾರಿ ಮಾಲೀಕರು ಊಟಕ್ಕೆ ಕಷ್ಟಪಡುವಂತಾಗಿದೆ. ಇದನ್ನು ಮನಗಂಡು ಅಂದಿನಿಂದ ಈ ಸಂಘವು ಈ ಸೇವೆ ಆರಂಭಿಸಿದ್ದು, ಪ್ರತಿ ದಿನ ಹೆದ್ದಾರಿಯಲ್ಲಿ ಸುಮಾರು 250 ಲಾರಿ ಚಾಲಕರುಗಳಿಗೆ ಆಹಾರದ ಪೊಟ್ಟಣ, ನೀರು ವಿತರಿಸುವ ಕಾರ್ಯವನ್ನು ಮಾಡುತ್ತಿದೆ.

ಅಂತೆಯೇ ಇಂದು ಸಹ ಇಲ್ಲಿನ ಹೆಬ್ಬಾಳ್ ಟೋಲ್ ಗೇಟ್ ಬಳಿ ಆಗಮಿಸುವ ಸರಕು-ಸಾಗಾಣೆ ಲಾರಿ ಚಾಲಕರುಗಳಿಗೆ ಆಹಾರದ ಪೊಟ್ಟಣ, ನೀರು ವಿತರಿಸುವ ಮುಖೇನ ಊಟಕ್ಕಾಗಿ ಅವರು ಕಷ್ಟ ಅನುಭವಿಸುವುದನ್ನು ತಪ್ಪಿಸುವ ಕಾರ್ಯ ಮಾಡಲಾಗುತ್ತಿದೆ.

ಈ ಸೇವೆಗೆ ದಾನಿಗಳಾದ ಮಹಾಂತೇಶ್ ಒಣರೊಟ್ಟಿ ಕೈಜೋಡಿಸಿದ್ದಾರೆ. ಈ ಸೇವೆ ಬಗ್ಗೆ ಸಂಘದ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್, ಜಂಟಿ ಕಾರ್ಯದರ್ಶಿ ಬೆಳ್ಳೂಡಿ ಶಿವಕುಮಾರ್, ಉಪಾಧ್ಯಕ್ಷ ಭೀಮಣ್ಣ, ದಾವಣಗೆರೆ ಲೋಕಲ್ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ದಾದಾಪೀರ್, ಕಾರ್ಯದರ್ಶಿ ಇಮಾಮ್ ಹುಸೇನ್ ಹಾಗೂ ಸಂಘದಿಂದ ತೃಪ್ತಿ ವ್ಯಕ್ತವಾಗುತ್ತಿದೆ.

## ನಿಟುವಳ್ಳಿ : ಕೊರೊನಾ ವಾರಿಯರ್ಸ್‌ಗೆ ಸನ್ಮಾನ



ದಾವಣಗೆರೆ,ಮೇ 13- ಕಾರ್ಮಿಕರ ದಿನಾಚರಣೆ ಪ್ರಯುಕ್ತ ಪಾಲಿಕೆ ಕಾರ್ಮಿಕರು, ಕೊರೊನಾ ವಾರಿಯರ್‌ಗಳನ್ನು ಅವರ ಸೇವೆ ಸ್ಮರಿಸಿ ಪಾಲಿಕೆ ಸದಸ್ಯರಾದ ಶ್ರೀಮತಿ ಸವಿತಾ ಹುಲ್ಮನಿ ಗಣೇಶ್, ಎ. ನಾಗರಾಜ್, ನಿಟ್ಟುವಳ್ಳಿ ಪ್ರೌಢಶಾಲೆಯ ಶಿಕ್ಷಕ ಕೆ.ಟಿ. ಜಯಪ್ಪ, ಎಸ್‌ಡಿಎಂಸಿಯ ಶಿವರುದ್ರಪ್ಪ ಇವರುಗಳು ಸನ್ಮಾನಿಸಿ, ಗೌರವಿಸಿದರು ಮತ್ತು ಅವರುಗಳಿಗೆ ಈ ಕೋವಿಡ್ ಸಂದರ್ಭಕ್ಕೆ ಬೇಕಾದ ಗ್ಲೌಸ್, ಫೇಸ್ ಮಾಸ್ಕ್, ಸ್ಯಾನಿಟೈಜರ್ ಹಾಗು ಇತರೆ ಪರಿಕರಗಳನ್ನು ಉಚಿತವಾಗಿ ನೀಡಿದರು.

## ಜನರ ನೆಮ್ಮದಿ ಕಸಿದ ಬಿಜೆಪಿ ಸರ್ಕಾರ

### ಜೂಮ್ ಮೀಟಿಂಗ್‌ನಲ್ಲಿ ಮಾಜಿ ಸ್ಪೀಕರ್ ಕೋಳಿವಾಡ

ರಾಣೇಬೆನ್ನೂರು, ಮೇ 13- ತಜ್ಞರ ಮಾತುಗಳನ್ನು ಅಲಕ್ಷಿಸಿ, ಅಮೆರಿಕಾ ಅಧ್ಯಕ್ಷರನ್ನು ಬರಮಾಡಿಕೊಳ್ಳುವ, ಕುದುರೆ ವ್ಯಾಪಾರದ ಮೂಲಕ ವಿವಿಧ ರಾಜ್ಯಗಳಲ್ಲಿ ಅಧಿಕಾರ ಕಬಳಿಸುವ, ಅನಾವಶ್ಯಕವಾಗಿ ತಬ್ಲೀಗಿ ಸಭೆ ನಡೆಸಿ ಕೇಂದ್ರದ ಬಿಜೆಪಿ ಸರ್ಕಾರ ದೇಶದ ಜನರ ನೆಮ್ಮದಿ ಹಾಳು ಮಾಡಿತು ಎಂದು ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ.ಕೋಳಿವಾಡ ಹರಿಹಾಯ್ದರು.

ಅವರಿಂದು ರಾಜಧಾನಿಯ ತಮ್ಮ ನಿವಾಸ ದಿಂದ ಪತ್ರಕರ್ತರೊಂದಿಗೆ ಜೂಮ್ ಸಭೆ ನಡೆಸಿದರು.

ಆಕ್ಸಿಜನ್ ಅನ್ನು ಹೊರ ದೇಶಗಳಿಗೆ ರವಾನೆ ಮಾಡಿ ಎರಡನೇ ಹಂತದ ತಜ್ಞರ ವರದಿಯನ್ನೂ ಸಹ ನಿರ್ಲಕ್ಷಿಸಿ ದೇಶದ ಜನರಿಗೆ ಮರೆಯಲಾರ ದಂತಹ ಅನ್ಯಾಯ ಮಾಡಿದೆ. ಈಗ ಮತ್ತೆ ಭಯಾನಕವಾದ ಮೂರನೇ ಹಂತ ಬರಲಿದೆ. ಅದು ಮಕ್ಕಳ ಪಾಲಿಗೆ ಘನಘೋರವಾದುದು ಎನ್ನಲಾಗುತ್ತಿದೆ ಎಂದು ಕೋಳಿವಾಡರು ಭಯ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರ ಇದ್ದಾಗ ಜನರು ನೆಮ್ಮದಿಯಿಂದ ಬದುಕಿದರು. ಈಗ ಜನರಿಗೆ ಆರೋಗ್ಯ, ನೆಮ್ಮದಿಯ ಬದುಕು ಕೊಡಿಸಲು ನ್ಯಾಯಾಂಗ ಇಲಾಖೆ ಸರ್ಕಾರಗಳಿಗೆ ಮಾರ್ಗ ದರ್ಶನ ನೀಡಿದ್ದು ಇದು ಅಭಿನಂದನಾರ್ಹ ಕಾರ್ಯ ಎಂದು ಕೋಳಿವಾಡ ಮೆಚ್ಚುಗೆ ವ್ಯಕ್ತಪಡಿಸಿದರು.

**ಪಿಕೆಕೆ ಕಾರ್ಯ :** ಕೆ.ಬಿ. ಕೋಳಿವಾಡರ ಮಗ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ ಮಾತನಾಡಿ, ತಮ್ಮದೇ ಆದ ಪಿಕೆಕೆ ಸಂಸ್ಥೆಯಿಂದ ತಾಲ್ಲೂಕಿನ ಜನರ ಆರೋಗ್ಯ ತಪಾಸಣೆ ನಡೆಸಿ ಆರೋಗ್ಯ ಇಲಾಖೆಯ ಮೂಲಕ ಸೂಕ್ತ ಚಿಕಿತ್ಸೆ ಕೊಡಿಸುವ ಕಾರ್ಯವನ್ನು ಸಂಸ್ಥೆ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಈಗಾಗಲೇ ಪ್ರಾರಂಭಿಸಿದ್ದಾರೆಂದು ಹೇಳಿ, ಕಳೆದ ಲಾಕ್‌ಡೌನ್ ಸಂದರ್ಭದಲ್ಲಿ ತಾವು ಮಾಡಿದ ಕಾರ್ಯಗಳಂತೆಯೇ ಈ ಬಾರಿಯೂ ಜನಪರ ಚಿಂತನೆ ನಡೆಸಿದ್ದೇನೆ ಎಂದರು.

**ಸುಲಿಗೆ :** ಖಾಸಗಿಯಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವವರ ಸುಲಿಗೆ ನಡೆಯುತ್ತಿದೆ. ನಮ್ಮ ಮನೆಯಲ್ಲಿ ಸೋಂಕಿತರಾದ ನಮ್ಮ ತಂದೆಯವರ ಗಂಟಲು ದ್ರವ ತಪಾಸಣೆಗೆ 6 ಸಾವಿರ, ನನ್ನ ಪತ್ನಿಗೆ 4 ನಾಲ್ಕು ಸಾವಿರ, ನಮ್ಮ ಸೊಸೆಗೆ 4 ಸಾವಿರ ಬಿಲ್ ಮಾಡಿದರು. ನಮಗೇ ಹೀಗಾದರೆ ಸಾಮಾನ್ಯ ಜನರ ಪರಿಸ್ಥಿತಿ ಹೇಗಿರಬಹುದು. ಒಟ್ಟಾರೆ ಸರ್ಕಾರಗಳು ಜನರ ಬದುಕನ್ನು ಸಂಪೂರ್ಣ ಹಾಳು ಮಾಡಿವೆ ಎಂದು ಪ್ರಕಾಶ್ ಕೋಳಿವಾಡ ಅವರು ಬೇಸರ ವ್ಯಕ್ತಪಡಿಸಿದರು.

## ಜೇನುಗೂಡು ಸಮಾಜದಿಂದ ಫೋಟೋ ಸ್ಪರ್ಧೆ

ದಾವಣಗೆರೆ, ಮೇ 13- ಜೇನುಗೂಡು ಮಹಿಳಾ ಸಮಾಜದಿಂದ ಸದಸ್ಯರಿಗೆ ತಾಯಂದಿರ ದಿನಾಚರಣೆ ಪ್ರಯುಕ್ತ 'ಸಾಂಪ್ರದಾಯಿಕ ನೋಟ' ತಾಯಿ ಮತ್ತು ಮಕ್ಕಳ ಫೋಟೋ ಸ್ಪರ್ಧೆ ನಡೆಯಿತು.

ತೀರ್ಪುಗಾರರಾಗಿ ಜೈನ್ ಫೋಟೋ ಸ್ಟುಡಿಯೋದ ಹೇಮಚಂದ್ರ ಆಗಮಿಸಿದ್ದರು. ತಂಡ ಒಂದರಲ್ಲಿ ಉಮಾ ವೆಂಕಟೇಶ್, ಕಾವ್ಯ ಪ್ರಥಮ ಬಹುಮಾನ, ಬೀನಾ, ಯಶ್ ದ್ವಿತೀಯ, ಮೇಘ,ನಿವೇದಿತಾ ತೃತೀಯ ಹಾಗೂ ಪ್ರೀತಿ, ಖುಷಿ, ಅನುಷ್ಕಾ 4ನೇ ಬಹುಮಾನ ಪಡೆದಿದ್ದಾರೆ.

ತಂಡ ಎರಡರಲ್ಲಿ ಪ್ರಥಮ ಬಹುಮಾನ ರೂಪ, ಚಂದು, ದ್ವಿತೀಯ ಸುಜಾತ ನಾಗೇಶ್, ಕಾವ್ಯಶ್ರೀ, ದರ್ಶನ್, ತೃತೀಯ ಜ್ಯೋತಿ, ಮಿಥುನ್, ಜೀವಿಕಾ ಹಾಗೂ 4ನೇ ಬಹುಮಾನವನ್ನು ಮಮತಾ ಹಾಗೂ ನಿಹಾರಿಕಾ ಗಳಿಸಿದ್ದಾರೆ ಎಂದು ಸಮಾಜದ ಅಧ್ಯಕ್ಷೆ ಸುಜಾತ ನಾಗೇಶ್ ತಿಳಿಸಿದ್ದಾರೆ.

## ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಂದೂಡಿಕೆ

**(1ನೇ ಪುಟದಿಂದ)** ಎರಡನೇ ಅಲೆಯ ಪ್ರಸರಣ ಸಂಪೂರ್ಣ ತಹಬಂದಿಗೆ ಬಂದ ಸಂದರ್ಭದಲ್ಲಿ, ಸಾಕಷ್ಟು ಮುಂಚಿತವಾಗಿ ದಿನಾಂಕಗಳನ್ನು ಪ್ರಕಟಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ವಿದ್ಯಾರ್ಥಿಗಳು ವಿಚಲಿತರಾಗದೇ ಏಕಾಗ್ರತೆಯಿಂದ ಪರೀಕ್ಷೆಯ ಸಿದ್ಧತೆಯಲ್ಲಿ ತೊಡಗಿಸಿಕೊಳ್ಳಬೇಕು, ಪರೀಕ್ಷೆಯ ಕುರಿತಂತೆ ಯಾವುದೇ ಕಾರಣಕ್ಕೂ ಆತಂಕಕ್ಕೊಳಗಾಗುವ ಅವಶ್ಯಕತೆ ಇಲ್ಲ ಎಂದು ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದ್ದಾರೆ.

## ಹಾಸ್ಟೆಲ್ ಕೇಂದ್ರ

**(1ನೇ ಪುಟದಿಂದ)** ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಿದ್ದಾರೆ.

ಈ ಬಗ್ಗೆ ವಿವರ ನೀಡಿರುವ ಡಿಸಿ ಮಹಾಂತೇಶ್ ಬೀಳಗಿ, ತರಳಬಾಳು ಜಗದ್ಗುರುಗಳು ಹಾಸ್ಟೆಲ್ ಅನ್ನು ಕೋವಿಡ್ ಕೇರ್ ಸೆಂಟರ್ ಆಗಿ ಬಳಸಿಕೊಳ್ಳಲು ತಿಳಿಸಿದ್ದಾರೆ. ನಗರ ಪಾಲಿಕೆ ಆಯುಕ್ತರು ಇದಕ್ಕಾಗಿ ಸ್ವಚ್ಛತಾ ಕ್ರಮ ತಗೆದುಕೊಂಡು ಬೆಡ್‌ಗಳನ್ನು ಸಿದ್ಧಪಡಿಸಿದ್ದಾರೆ ಎಂದರು.

ವಿದ್ಯಾನಗರ, ತರಳಬಾಳು ನಗರ, ಎಂಸಿಸಿ 'ಎ' ಬ್ಲಾಕ್ ಮುಂತಾದ ಕಡೆಗಳಲ್ಲಿರುವ ಜನರು, ತಮ್ಮ ಮನೆಯಲ್ಲಿ ಏನೇ ಸೌಲಭ್ಯಗಳಿದ್ದರೂ, 8 ದಿನ ಈ ಕೋವಿಡ್ ಕೇಂದ್ರದಲ್ಲಿರುವ ಮೂಲಕ ಸೋಂಕು ಹರಡುವಿಕೆ ತಡೆಯಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಕರೆ ನೀಡಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಪೂರ್ವ 30x40, 30x50, 40x60, ಪಶ್ಚಿಮ 30x40, 38x40, ಹೊಸ ಬನಶಂಕರಿ ಪೂರ್ವ 30x50, ಪಶ್ಚಿಮ 40x35, 40x75, ಮಹಾಲಕ್ಷ್ಮಿ ಲೇಔಟ್ ಪಕ್ಕ ಪಶ್ಚಿಮ 30x40
ಸೈಟುಗಳಿಗೆ ಸಂಪರ್ಕಿಸಿ
ಐಗೂರು ವಿಜಯ್ ಕುಮಾರ್ : 9945702495
ಸುರೇಶ್: 95911 60520

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. ಬಡಾವಣೆ 'ಎ' ಬ್ಲಾಕ್ ಅಥಣಿ ಕಾಲೇಜು ಹತ್ತಿರ, ಪೂರ್ವ 30x46 (ಡುಪ್ಲೆಕ್ಸ್) ಎಸ್.ಎಸ್ 'ಬಿ' ಬ್ಲಾಕ್ ಪೂರ್ವ (ಡುಪ್ಲೆಕ್ಸ್) STB Units 30x40 ಬಸವೇಶ್ವರ ಲೇಔಟ್ ಪೂರ್ವ, 30x40 (ಮೇಲೆ, ಕೆಳಗೆ ಮನೆ) ಪಶ್ಚಿಮ 30x45
ಐಗೂರು ವಿಜಯ್ ಕುಮಾರ್ : 9945702495
ಸುರೇಶ್: 95911 60520

**ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x48 East, 30x50 West, 30x57 East, 60x50 West, 30x40 West,40 ಅಡಿ ರೋಡಿಗಿದೆ,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ದಿ.ಎಂ. ಅಚ್ಯುತರಾಮ್‌ರಾವ್ ಇವರ ಜ್ಞಾಪಕಾರ್ಥವಾಗಿ ಪತಿ: ಶ್ರೀಮತಿ ರಾಮತುಳಸಮ್ಮ ಇವರ ಸೇವಾರ್ಥ ರಾಗಿಮಂಡ್ರಿ, ಆಂಧ್ರಪ್ರದೇಶ್
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಆಯುಷ್ ಚಾರಿಟೇಬಲ್ ಟ್ರಸ್ಟ್**
**ಆಯುಷ್ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧರು, ಅಂಗವಿಕಲರು, ಪಾರ್ಶ್ವವಾಯು ಪೀಡಿತರು ಹಾಗೂ ರೋಗಿಗಳ ಆರೈಕೆ ಮಾಡಲಾಗುವುದು.
ವಿದ್ಯಾನಗರ, ದಾವಣಗೆರೆ.
97315 11795

**ಬೇಕಾಗಿದ್ದಾರೆ**
ನುರಿತ ರೈಸ್‌ಮಿಲ್ ಡ್ರೈಯರ್ ಆಪರೇಟರ್ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
ಮೊ: 95918 04999
ಬಸವರಾಜ್: 96635 18383

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**BUSINESS OPPORTUNITY**
No Investment, No Boss !! Work Part Time Earn Unlimited Income
99009 19091

**1 ಎಕರೆ ಜಮೀನು ಮಾರಾಟಕ್ಕಿದೆ**
ದೊಗ್ಗಳ್ಳಿ, ಬಾತಿ, ಶಿವನಳ್ಳಿ, ಷಂಷೀಪುರ Etc...
74112 50447

**ಸೈಟ್‌ಗಳು ಮಾರಾಟಕ್ಕಿವೆ**
ಶ್ರೀ ಬಸವ ಜಯಂತಿ, ಅಕ್ಷಯ ತೃತೀಯ ಅಂಗವಾಗಿ ಹರಿಹರ ಮತ್ತು ದಾವಣಗೆರೆಯಲ್ಲಿ ದೂಡಾ ಅಪ್ರೂವಲ್ ಆದ ಸೈಟ್‌ಗಳು ಮಾರಾಟಕ್ಕಿವೆ. ವಿಶೇಷ ಸುಲಭ ಕಂತುಗಳಲ್ಲಿ
Rs 14500/- , 899 sqft
98458 61220, 86603 11021, 93431 10009, 94481 55202

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಮನೆ ಲೀಸ್‌ಗಿದೆ**
#5626/7 'ಜ್ಯೋತಿ ನಿಲಯ' ಎಸ್.ಎಸ್. ಲೇಔಟ್ ಬಿ ಬ್ಲಾಕ್ ಡಬಲ್ ಬೆಡ್‌ರೂಂ, ವಾಸ್ತು ಪ್ರಕಾರ ಇದೆ, ಗ್ರೌಂಡ್ ಫ್ಲೋರ್ ಮನೆ ಅಳತೆ 50x30 ಶುದ್ಧ ಸಸ್ಯಹಾರಿಗಳಿಗೆ ಮಾತ್ರ ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
93410 04279
(ಸುರೇಶ್ ಕುಮಾರ್)

**ಟ್ರ್ಯಾಕ್ಟರ್ ಮಾರಾಟಕ್ಕಿವೆ**
MF-241, 2019 ಮಾಡೆಲ್‌ನ ಉತ್ತಮ ಕಂಡೀಷನ್‌ನಲ್ಲಿರುವ 1 ಟ್ರೈಲರ್ ಮತ್ತು 2 ಇಂಜಿನ್ ಟ್ರ್ಯಾಕ್ಟರ್ ಮಾರಾಟಕ್ಕಿವೆ.
97319 99977
88842 28109

**ಸಂಪರ್ಕಿಸಿ**
ನಿಮ್ಮನ್ನು ಕಾಡುವ ಸಮಸ್ಯೆಗಳಾದ ಅನಾರೋಗ್ಯ, ಸಂತಾನ ದೋಷ, ಸತಿ-ಪತಿ ಕಲಹ, ಮನೆಗಳಲ್ಲಿ ಸತ್ವಹೀನತೆ, ದುಷ್ಟ ಶಕ್ತಿಗಳ ಮಾಟ, ಮಂತ್ರ ಬಾಧೆ, ಶತ್ರುಗಳ ಕಾಟ, ಜನ್ಮಾಂತರದ ದೋಷಗಳನ್ನು ಸಾಂದೀಪನೀ ತಂತ್ರದಿಂ ನಿವಾರಣೆಗೆ ಕೂಡಲೇ ಸಂಪರ್ಕಿಸಿ :
76767 50280

**ಓಂ ಶ್ರೀ ಕೇರಳ ಭದ್ರಕಾಳಿ ಜ್ಯೋತಿಷ್ಯರು**
ಪಂಡಿತ್ ಶಕ್ತಿಪ್ರಸಾದ್
ನುಡಿದಂತೆ ನಡೆಯುವುದು.ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ, ಆರೋಗ್ಯ, ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಇಂದೇ ಕರೆ ಮಾಡಿ ಪರಿಹರಿಸಿಕೊಳ್ಳಿ. 100% ಪರಿಹಾರ ಶತಸಿದ್ಧ.
9980770791

**ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ಜ್ಯೋತಿಷ್ಯಾಲಯ**
**ಪಂಡಿತ್ ಚಂದ್ರಶೇಖರ್ ಗುರೂಜಿ**
ನಂಬರ್ ಒನ್ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ದಾಂಪತ್ಯ ಸಮಸ್ಯೆ, ಸ್ತ್ರೀ-ಪುರುಷ ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿದ್ದರೂ 3ದಿನದಲ್ಲಿ ಶಾಶ್ವತ ಪರಿಹಾರ. ಆಗದಿದ್ದಲ್ಲಿ ಹಣ ವಾಪಸ್
ಮೊ: 99800 57857

**ಜಾಗ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80x30 ಅಡಿ ಅಳತೆಯ ಜಾಗ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
97310 55765

**ಪ್ರತಿಷ್ಠಿತ CBSE ಶಾಲೆಗೆ ಅನುಭವಿ ಶಿಕ್ಷಕರು ಬೇಕಾಗಿದ್ದಾರೆ**
ಸಮಾಜ ವಿಜ್ಞಾನ, ಸಂಸ್ಕೃತ, Chemistry ಮತ್ತು Biology, ಗಣಿತ,
ಸಂಪರ್ಕಿಸಿ : 9844443223, 7378392875, 9538688975

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಲ್.ಐ.ಸಿ. ಕಾಲೋನಿ, 4ನೇ ಮುಖ್ಯ ರಸ್ತೆ, ನೂತನ ಕಾಲೇಜು ಹಿಂಭಾಗ, ಪೂರ್ವದಿಕ್ಕಿನ, ಸಂಪೂರ್ಣ ವಾಸ್ತುವುಳ್ಳ, 3 ಬೆಡ್‌ರೂಂ ಮನೆ ಮುನ್ಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿದ್ದು ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ.
93410 12022

**ಕುರಿಗಳು ಮಾರಾಟಕ್ಕಿವೆ**
350 per kg
Phone no: 9482146430

# ಎಂಟು 'ಇಂದಿರಾ' ಕ್ಯಾಂಟೀನ್ ಆರಂಭಕ್ಕೆ ಒತ್ತಾಯ

**3 ಇಂದಿರಾ ಕ್ಯಾಂಟೀನ್‌ಗಳು ಮಾತ್ರ ಆರಂಭ**

ದಾವಣಗೆರೆ, ಮೇ 13- ಲಾಕ್‌ಡೌನ್ ನೆಪವೊಡ್ಡಿ ಇಂದಿರಾ ಕ್ಯಾಂಟೀನ್‌ಗಳನ್ನು ಬಂದ್ ಮಾಡಲಾಗಿದ್ದು, ಕಳೆದ 11ರ ರಾತ್ರಿಯಿಂದ ಹೈಕೋರ್ಟ್‌ನ ನಿರ್ದೇಶನದ ಮೇರೆಗೆ ಆರಂಭಿಸಿರುವ ಹಿನ್ನೆಲೆಯಲ್ಲಿ ಇಂದು ಪಾಲಿಕೆ ವಿಪಕ್ಷ ನಾಯಕ ನಾಗರಾಜ್ ಅವರು ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡಿ ಪರಿಶೀಲಿಸಿದರು.

ನಗರದಲ್ಲಿ 8 ಇಂದಿರಾ ಕ್ಯಾಂಟೀನ್‌ಗಳಿದ್ದರೂ ಸಹ ಕೇವಲ 3 ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲಾಗಿದೆ. ಇದರಿಂದ ಹಸಿದವರಿಗೆ ದ್ರೋಹ ಬಗೆದಂತಾಗಿದ್ದು, ಈ ಕೂಡಲೇ 8 ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಿ, ಸರ್ಕಾರದ ನಿಯಮದಂತೆ ಕನಿಷ್ಟ 300 ಜನರಿಗೆ ಪ್ರತಿದಿನ ತಿಂಡಿ, ಊಟ ಒದಗಿಸಬೇಕೆಂದು ಆಗ್ರಹಿಸಿದರು.

ಭೇಟಿ ವೇಳೆ ದಾವಣಗೆರೆ ಎಪಿಎಂಸಿ ಪ್ರಾಂಗಣದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ 300 ಜನರ ಬದಲಿಗೆ ಕೇವಲ 100 ಜನರಿಗೆ ಊಟ ನೀಡಿದ್ದರಿಂದ ಇನ್ನು ಸರತಿ ಸಾಲಿನಲ್ಲಿ ನಿಂತಿದ್ದ 150ಕ್ಕೂ ಹೆಚ್ಚು ಜನರು ವಾಪಾಸ್ ಹೋಗಿದ್ದು, ಅವರ ಹಸಿವಿನ ನೋವಿನ ಶಾಪ ಆಡಳಿತ ಶಾಹಿಗಳಿಗೆ ತಟ್ಟಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಸಿವಿನ ನೋವು ಕಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯಾದ್ಯಂತ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಿ ಲಕ್ಷಾಂತರ ಬಡವರಿಗೆ, ಕೂಲಿ ಕಾರ್ಮಿಕರಿಗೆ ಕಡಿಮೆ ದರದಲ್ಲಿ ಆಹಾರ ಒದಗಿಸುವ ಇಂತಹ ಕಾರ್ಯಕ್ಕೆ ಬಿಜೆಪಿ ಆಡಳಿತಕ್ಕೆ ಬಂದಾಗಿನಿಂದ ಒಂದಿಲ್ಲೊಂದು ಕಾರಣ ನೀಡಿ ಬಂದ್ ಮಾಡುತ್ತಿದ್ದು, ಹೈಕೋರ್ಟ್ ನಿರ್ದೇಶನ ನೀಡಿದ್ದರಿಂದ ಇಂದಿರಾ ಕ್ಯಾಂಟೀನ್‌ಗಳು ಆರಂಭವಾಗಿದ್ದು, ಅದರಲ್ಲೂ ಆಡಳಿತ ಪಕ್ಷ ಪೂರ್ಣ ಪ್ರಮಾಣದಲ್ಲಿ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸದೆ ಬಡವರಿಗೆ, ದಿನಗೂಲಿ ಕಾರ್ಮಿಕರಿಗೆ ದ್ರೋಹ ಬಗೆಯುತ್ತಿದೆ ಎಂದು ದೂರಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯ ಪಾಮೇನಹಳ್ಳಿ ನಾಗರಾಜ್, ಮುಖಂಡ ಗಣೇಶ್ ಹುಲ್ಮನಿ, ಜಗದೀಶ್ ಮತ್ತಿತರರಿದ್ದರು.



ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ನೇತೃತ್ವದಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಭೇಟಿ, ಪರಿಶೀಲನೆ.

# ಗ್ರಾಮೀಣ ಭಾಗದಲ್ಲಿ ಹರಡಿದ ಕೊರೊನಾ ಸೋಂಕು

## ಅರ್ಧ ಪ್ರಕರಣಗಳು ಗ್ರಾಮಾಂತರದಲ್ಲಿ, ಮೂರನೇ ಮಟ್ಟವಾದ ಸಮುದಾಯ ಹಂತಕ್ಕೆ ಸೋಂಕು



ದಾವಣಗೆರೆ, ಮೇ 13 - ಮೇ ತಿಂಗಳಲ್ಲಿ ಕಂಡು ಬಂದ ಕೊರೊನಾ ಸೋಂಕಿನಲ್ಲಿ ಅರ್ಧದಷ್ಟು ಗ್ರಾಮೀಣ ಭಾಗದ್ದಾಗಿದೆ. ಕೊರೊನಾ ಸೋಂಕು ಈಗ ಮೂರನೇ ಮಟ್ಟವಾದ ಸಮುದಾಯ ಹಂತದಲ್ಲಿ ಹರಡುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅಧ್ಯಕ್ಷತೆಯಲ್ಲಿ ನಡೆದ ಕೊರೊನಾ ನಿಯಂತ್ರಣ ಸಭೆಯಲ್ಲಿ ಮಾಹಿತಿ ನೀಡಲಾಗಿದೆ.

ಎರಡನೇ ಅಲೆ ಆರಂಭವಾದ ನಂತರ ಏಪ್ರಿಲ್‌ನಲ್ಲಿ 3,549 ಕೊರೊನಾ ಸೋಂಕುಗಳು ಕಂಡು ಬಂದಿದ್ದವು. ಇದರಲ್ಲಿ ಶೇ.75-80ರಷ್ಟು ನಗರ ಪ್ರದೇಶದವುಗಳಾಗಿದ್ದವು. ಆದರೆ, ಮೇ ತಿಂಗಳಲ್ಲಿ 4,381 ಸೋಂಕುಗಳು ಕಂಡು ಬಂದಿದ್ದು, ಇದರಲ್ಲಿ ಅರ್ಧದಷ್ಟು ಗ್ರಾಮೀಣ ಭಾಗದವು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್ ಸಭೆಗೆ ತಿಳಿಸಿದ್ದಾರೆ.

ಹಳ್ಳಿಯಿಂದ ನಗರಕ್ಕೆ ತರಕಾರಿ, ಹಾಲು, ಹಣ್ಣು ಇತ್ಯಾದಿ ಮಾರಲು ಬರುವವರು, ಆಸ್ಪತ್ರೆಗೆ ರೋಗಿಗಳನ್ನು ನೋಡಲು ಬರುವವರು ನಗರದಿಂದ ಸೋಂಕನ್ನು ಹಳ್ಳಿಗೆ ತಲುಪಿಸಿರುವ ಸಾಧ್ಯತೆ ಇದೆ. ಬೆಂಗಳೂರು ಹಾಗೂ ಮೈಸೂರಿನಂತಹ ಊರುಗಳಿಂದ ಬಂದವರಿಂದಲೂ ಸೋಂಕಾಗಿರುವ ಸಾಧ್ಯತೆ ಇದೆ ಎಂದವರು ಹೇಳಿದ್ದಾರೆ. ಕೊರೊನಾ ಹರಡುವಿಕೆಯಲ್ಲಿ ನಾಲ್ಕು ಹಂತಗಳಿವೆ. ಪ್ರಾಥಮಿಕ, ಸ್ಥಳೀಯ, ಸಮುದಾಯ ಹಾಗೂ ಸಾಂಕ್ರಾಮಿಕ ಮಹಾಮಾರಿ ಎಂಬ ಹಂತಗಳಿವೆ. ಇದರಲ್ಲಿ ನಾವೀಗ ಸಮುದಾಯ ಹರಡುವಿಕೆಯ ಹಂತದಲ್ಲಿದ್ದೇವೆ ಎಂದು ರಾಘವನ್ ಹೇಳಿದ್ದಾರೆ.

ಸಂಸದ ಸಿದ್ದೇಶ್ವರ ಮಾತನಾಡಿ, ಕೊರೊನಾದ ಮೂರನೇ ಅಲೆ ಬರುವುದಕ್ಕೆ ಮುಂಚೆ ವೈದ್ಯರ ನೇಮಕವಾಗಬೇಕು. ಮೂರನೇ ಅಲೆಯಲ್ಲಿ ಮಕ್ಕಳಿಗೆ ಹೆಚ್ಚು ಸೋಂಕಾಗಬಹುದು ಎನ್ನಲಾಗುತ್ತಿದೆ. ಈಗಲೇ ಮಕ್ಕಳ ತಜ್ಞರ ನೇಮಕವಾಗಬೇಕು ಎಂದು ಹೇಳಿದರು.

ವೈದ್ಯಕೀಯ ಸಿಬ್ಬಂದಿ ನೇಮಕದ ಕುರಿತು ಮಾಹಿತಿ ನೀಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, 24 ವೈದ್ಯರು ಹಾಗೂ ಆರು ತಜ್ಞ ವೈದ್ಯರ ನೇರ ನೇಮಕಾತಿಗೆ ಪ್ರಕಟಣೆ ಹೊರಡಿಸಲಾಗಿತ್ತು. 17 ವೈದ್ಯರ ನೇಮಕವಾಗಿದ್ದು, ಅವರನ್ನು ಚಿಗಟೇರಿ ಹಾಗೂ ತಾಲ್ಲೂಕು ಆಸ್ಪತ್ರೆಗಳಿಗೆ ನೇಮಿಸಲಾಗಿದೆ. 30 ಸ್ಟಾಫ್ ನರ್ಸ್‌ಗಳನ್ನೂ ನೇಮಿಸಲಾಗಿದೆ ಎಂದರು. ಉಳಿದ ವೈದ್ಯರು ಹಾಗೂ ನರ್ಸ್‌ಗಳನ್ನು ನೇಮಿಸಿಕೊಳ್ಳುವಂತೆ ಸೂಚನೆ ನೀಡಿದ ಸಚಿವ ಭೈರತಿ ಬಸವರಾಜ್, ಯಾವುದೇ ರೋಗಿಗೆ ಬೆಡ್ ಇಲ್ಲ ಎಂದು ನಿರಾಕರಿಸಬಾರದು ಎಂದು ಸೂಚನೆ ನೀಡಿದರು.

ಆರೋಗ್ಯ ಕರ್ನಾಟಕ ಆಯುಷ್ಮಾನ್ ಭಾರತ್ ಯೋಜನೆಯಡಿ ಖಾಸಗಿ ಆಸ್ಪತ್ರೆಗಳಿಗೆ 64 ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂಬ ಮಾಹಿತಿಯಿಂದ ತೃಪ್ತರಾಗದ ಭೈರತಿ, 2000 ಬೆಡ್‌ಗಳು ಜಿಲ್ಲೆಯಲ್ಲಿ ಲಭ್ಯವಿವೆ. ಹೀಗಾಗಿ ಆರೋಗ್ಯ ಕರ್ನಾಟಕ ಯೋಜನೆಯಡಿ ಹೆಚ್ಚಿನ ಜನರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಉಚಿತ ಚಿಕಿತ್ಸೆ ಕೊಡಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಕೊರೊನಾ ಸೋಂಕು ಮುಗಿಯುವವರೆಗೂ ಎಸ್‌ಡಿಆರ್‌ಎಫ್ ಮಾರ್ಗಸೂಚಿ ಅಡಿ ಸಿಬ್ಬಂದಿಯ ವೇತನ ಪಾವತಿಗೆ ವ್ಯವಸ್ಥೆ ಮಾಡಿಕೊಳ್ಳಬಹುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಚನ್ನಗಿರಿ ಶಾಸಕ ಹಾಗೂ ಕೆಎಸ್‌ಡಿಎಲ್ ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪ, ಚನ್ನಗಿರಿ ಆಸ್ಪತ್ರೆಯಲ್ಲಿ ಐದು ವೆಂಟಿಲೇಟರ್‌ಗಳಿದ್ದು, ಅವುಗಳ ಬಳಕೆಗೆ ಅಗತ್ಯವಾದ ವೈದ್ಯಕೀಯ ಸಿಬ್ಬಂದಿ ಹಾಗೂ ಸೌಲಭ್ಯ ಕಲ್ಪಿಸಬೇಕು. ಕೆರೆಬಿಳಚಿ ಹಾಗೂ ಸಂತೇಬೆನ್ನೂರು ಆಸ್ಪತ್ರೆಗಳಿಗೂ ಸೌಲಭ್ಯ ಕಲ್ಪಿಸಬೇಕೆಂದು ಕೇಳಿದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹಾಗೂ ಶಾಸಕ ಎಂ.ಪಿ.ರೇಣುಕಾಚಾರ್ಯ ಮಾತನಾಡಿ, ಹೊನ್ನಾಳಿ, ಸಾಸ್ವೆಹಳ್ಳಿ ಹಾಗೂ ಚೀಲೂರು ಆಸ್ಪತ್ರೆಗಳಿಗೆ ವೈದ್ಯರ ಅಗತ್ಯವಿದೆ. ಆಕ್ಸಿಜನ್ ಸಿಲಿಂಡರ್‌ಗಳ ಸಂಖ್ಯೆ ಹೆಚ್ಚಿಸಬೇಕೆಂದು ಕೇಳಿದರು.

### 'ಕೊರೊನಾ ರೀತಿಯ' ರೋಗದಿಂದಲೇ ಹೆಚ್ಚು ಸಾವು

ಜಿಲ್ಲೆಯಲ್ಲಿ ಕೊರೊನಾದ ಎರಡನೇ ಅಲೆಯಲ್ಲಿ ಇದುವರೆಗೆ 44 ಸಾವುಗಳು ಸಂಭವಿಸಿವೆ. ಆದರೆ, ಕೊರೊನಾ ಪಾಸಿಟಿವ್ ಬಾರದೇ ಇದ್ದರೂ, ಕೊರೊನಾ ಲಕ್ಷಣಗಳು ಹೊಂದಿದವರ 78 ಸಾವುಗಳು ಸಂಭವಿಸಿವೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್ ತಿಳಿಸಿದ್ದಾರೆ.

ಆರ್‌ಟಿ - ಪಿಸಿಆರ್ ಟೆಸ್ಟ್ ಮಾಡಿದಾಗ ನೆಗೆಟಿವ್ ಬಂದಿರುತ್ತದೆ. ಆದರೆ, ಸಿ.ಟಿ. - ಸ್ಕ್ಯಾನ್ ಮಾಡಿದಾಗ ಕೊರೊನಾ ಸೋಂಕಿರುವುದು ಸ್ಪಷ್ಟವಾಗಿರುತ್ತದೆ. ಇವುಗಳನ್ನು ಉಸಿರಾಟದ ಸಮಸ್ಯೆಯ ಪ್ರಕರಣ ಎಂದು ಪರಿಗಣಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಮೊನ್ನೆ ಹರಿಹರದಲ್ಲಿ ಇದೇ ರೀತಿಯ ಪ್ರಕರಣವಾಗಿತ್ತು. ಐವರು ಮೃತಪಟ್ಟಿದ್ದರೆ, ಒಬ್ಬರು ಮಾತ್ರ ಕೊರೊನಾದಿಂದ ಸಾವನ್ನಪ್ಪಿದ್ದರು. ಎಲ್ಲ ಸಾವುಗಳ ಬಗ್ಗೆಯೂ ಸರ್ಕಾರಕ್ಕೆ ವರದಿ ಕಳಿಸಲಾಗುತ್ತದೆ ಎಂದವರು ಹೇಳಿದ್ದಾರೆ.

ಸರ್ಕಾರದ ನಿಯಮಾವಳಿಗಳ ಪ್ರಕಾರ ಕೊರೊನಾ ಸೋಂಕಿಗೆ ಸಿಲುಕಿ ಬಿಡುಗಡೆಯಾದ ನಂತರ ಕಿಡ್ನಿ, ಹೃದಯ ಇತ್ಯಾದಿಗಳಿಂದ ಸಾವನ್ನಪ್ಪಿದ್ದರೆ ಅದನ್ನು ಕೊರೊನಾ ಸಾವು ಎನ್ನಲಾಗದು ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

### ಕೊರೊನಾಗೆ ಜನ ಹೆದರುತ್ತಿಲ್ಲ

ಕೊರೊನಾದ ಮೊದಲ ಅಲೆ ಬಂದಾಗ ಜನ ಹೆದರುತ್ತಿದ್ದರು. ಆದರೆ, ಎರಡನೇ ಅಲೆ ಬಂದಾಗ ಜನ ಹೆದರುತ್ತಿಲ್ಲ. ಸೀಲ್‌ಡೌನ್ ಧಿಕ್ಕರಿಸುತ್ತಿದ್ದಾರೆ. ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತರ ಜೊತೆಗೇ ಮನೆಯವರು ಬಂದಿರುತ್ತಿದ್ದಾರೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಲಾಕ್‌ಡೌನ್ ಸಡಿಲ ಆಗಿರುವುದರಿಂದ ಜನರು ಸ್ವೇಚ್ಛಾಚಾರಕ್ಕೆ ತಿರುಗಿದ್ದಾರೆ. ಕೊರೊನಾ ರೋಗಿಗಳ ಜೊತೆಗೇ ಮನೆಯವರೂ ಇರುತ್ತಾರೆ. ವೈದ್ಯರು ಹೇಳಿದರೂ ಕಿವಿಗೊಡುವುದಿಲ್ಲ ಎಂದು ಶಾಸಕ ಎಂ.ಪಿ.ರೇಣುಕಾಚಾರ್ಯ ಬೇಸರ ವ್ಯಕ್ತಪಡಿಸಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಆಸ್ಪತ್ರೆಯಲ್ಲಿ ರೋಗಿಗಳೇ ಆಕ್ಸಿಜನ್ ಮಟ್ಟ ಫಿಕ್ಸ್ ಮಾಡಿಕೊಳ್ಳುವ ಘಟನೆಗಳೂ ನಡೆದಿವೆ. ಆಕ್ಸಿಜನ್ ಹೆಚ್ಚಾಗಿ ಅದೇ ಆರೋಗ್ಯಕ್ಕೆ ಅಪಾಯ ತಂದ ಘಟನೆ ಹರಿಹರದಲ್ಲಿ ನಡೆದಿತ್ತು ಎಂದರು.

### ಭತ್ತ ಖರೀದಿ ಅವಧಿ ವಿಸ್ತರಣೆಗೆ ಪ್ರಸ್ತಾವನೆ

ಬೆಂಬಲ ಬೆಲೆಯಲ್ಲಿ ಭತ್ತದ ಖರೀದಿಗೆ ನೋಂದಾಯಿಸಿಕೊಳ್ಳಲು ಈ ಹಿಂದೆ ಮೇ 5ರ ಗಡುವು ನೀಡಲಾಗಿತ್ತು. ಈಗ ಅದನ್ನು ಜೂನ್ 30ರವರೆಗೆ ವಿಸ್ತರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಭತ್ತದ ಖರೀದಿಯ ನೋಂದಣಿ ನಿಲ್ಲಿಸಿರುವುದರಿಂದ ರೈತರಿಗೆ ತೊಂದರೆಯಾಗಿದೆ. ಭತ್ತದ ದರ ಕುಸಿದಿದೆ ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಹೇಳಿದ್ದರು. ನಂತರ ಜಿಲ್ಲಾಧಿಕಾರಿ ಈ ಮಾಹಿತಿ ನೀಡಿದ್ದಾರೆ.

# ವಾರದಲ್ಲಿ 4 ದಿನ ಸಂಪೂರ್ಣ ಸ್ತಬ್ಧ

(1ನೇ ಪುಟದಿಂದ) ತೆಗೆದುಕೊಳ್ಳಲಾಗುವುದು ಎಂದು ಬಸವರಾಜ ಹೇಳಿದ್ದಾರೆ.

ಸಭೆಯಲ್ಲಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಶಿವಮೊಗ್ಗ ಮಾದರಿಯಲ್ಲಿ ನಾಲ್ಕು ದಿನ ಸಂಪೂರ್ಣ ಲಾಕ್‌ಡೌನ್ ಮಾಡಬೇಕು ಎಂದು ಸಲಹೆ ನೀಡಿದರು. ಇದಕ್ಕೆ ಸಭೆಯಲ್ಲಿದ್ದ ಶಾಸಕರು ಬೆಂಬಲ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಕೊರೊನಾ 2ನೇ ಅಲೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಇನ್ನಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ. ವಾರದಲ್ಲಿ 04 ದಿನ ಸಂಪೂರ್ಣ ಲಾಕ್‌ಡೌನ್ ಹಾಗೂ 03 ದಿನ ಈಗಿರುವಂತೆ ಸಾಮಾನ್ಯ ಲಾಕ್‌ಡೌನ್ ಜಾರಿಗೊಳಿಸಬೇಕು. ಈಗಾಗಲೇ ಶಿವಮೊಗ್ಗ ಜಿಲ್ಲೆಯಲ್ಲಿ ಈ ರೀತಿ ಕ್ರಮ ಕೈಗೊಂಡಿದ್ದು, ದಾವಣಗೆರೆ ಜಿಲ್ಲೆಯಲ್ಲಿಯೂ ಇದೇ ಮಾದರಿಯನ್ನು ಅನುಸರಿಸುವುದು ಸೂಕ್ತ ಎಂದು ಶಾಸಕರುಗಳಾದ ಮಾಡಾಳ್ ವಿರುಪಾಕ್ಷಪ್ಪ, ಎಂ.ಪಿ. ರೇಣುಕಾಚಾರ್ಯ ಅವರು ಸಚಿವರಿಗೆ ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಸಚಿವರು, ಜಿಲ್ಲೆಯಲ್ಲಿ ಕೂಡಲೇ ವಾರದ 04 ದಿನ ಸಂಪೂರ್ಣ ಲಾಕ್‌ಡೌನ್ ವಿಧಿಸಲು ಅಗತ್ಯ ಕ್ರಮ ಕೈಗೊಂಡು, ಯಾವ ವಾರಗಳಂದು ಯಾವ ರೀತಿಯ ಲಾಕ್‌ಡೌನ್ ಇರಬೇಕು ಎಂಬುದನ್ನು ಜಿಲ್ಲಾಧಿಕಾರಿಗಳು ನಿರ್ಧರಿಸಿ, ಆದೇಶ ಹೊರಡಿಸಬೇಕು. ಸಂಪೂರ್ಣ ಲಾಕ್‌ಡೌನ್ ಅವಧಿಯಲ್ಲಿ ಒಂದು ನರಪಿಳ್ಳೆಯೂ ರಸ್ತೆಗಿಳಿಯದಂತೆ ಕಠಿಣ ಕ್ರಮವನ್ನು ಪೊಲೀಸ್ ಇಲಾಖೆ ಕೈಗೊಳ್ಳಬೇಕು ಎಂದು ಸಚಿವರು ಸಭೆಯಲ್ಲಿಯೇ ಸೂಚನೆ ನೀಡಿದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹಾಗೂ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಲಾಕ್‌ಡೌನ್ ಸಂದರ್ಭದಲ್ಲಿ ಪೊಲೀಸ್ ಇಲಾಖೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡದೇ ಹೋದರೆ ಕೊರೊನಾ ನಿಯಂತ್ರಣ ಮಾಡಲು ಸಾಧ್ಯವಿಲ್ಲ. ಲಾಕ್‌ಡೌನ್ ಸಂದರ್ಭದಲ್ಲಿ ಪೊಲೀಸರು ಕಠಿಣ ಕ್ರಮ ಜರುಗಿಸುವುದು ಅನಿವಾರ್ಯವಾಗಿದೆ ಎಂದರು.

ಸಭೆಯಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್, ಶಾಸಕ ಹಾಗೂ ಲಿಡ್ಕರ್ ಅಧ್ಯಕ್ಷ ಪ್ರೊ. ಲಿಂಗಣ್ಣ, ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್, ಎಸ್ಪಿ ಹನುಮಂತರಾಯ, ಜಿ.ಪಂ. ಸಿಇಒ ವಿಜಯಮಹಾಂತೇಶ್ ದಾನಮ್ಮನವರ್, ಡಿಹೆಚ್‌ಒ ಡಾ. ನಾಗರಾಜ್ ಸೇರಿದಂತೆ ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು.

### ಜಿಲ್ಲೆಗೆ ಎರಡು ಆಕ್ಸಿಜನ್ ಘಟಕಗಳ ಮಂಜೂರಾತಿ

ಕೇಂದ್ರ ಸರ್ಕಾರದಿಂದ ದಾವಣಗೆರೆ ಜಿಲ್ಲೆಗೆ 10 ಕೆ.ಎಲ್. ಸಾಮರ್ಥ್ಯದ ವೈದ್ಯಕೀಯ ಬಳಕೆಯ ಆಕ್ಸಿಜನ್ ಘಟಕ ಸ್ಥಾಪನೆಗೆ ಮಂಜೂರಾತಿ ನೀಡಿದ್ದು, ಈ ಪೈಕಿ ದಾವಣಗೆರೆ ಜಿಲ್ಲೆಗೂ ಮಂಜೂರು ಮಾಡಲಾಗಿದೆ. 86 ಲಕ್ಷ ರೂ. ವೆಚ್ಚದಲ್ಲಿ ಈ ಘಟಕ ಸ್ಥಾಪನೆಗೆ ಕೇಂದ್ರ ಸರ್ಕಾರ ಮಂಜೂರಾತಿ ನೀಡಿದೆ. ಆಕ್ಸಿಜನ್ ಘಟಕ ಪೂರೈಸುವ ಕಂಪನಿ ಅಧಿಕಾರಿಗಳನ್ನು ಈಗಾಗಲೇ ಸಂಪರ್ಕಿಸಿ ಮಾಹಿತಿ ಪಡೆಯಲಾಗಿದೆ. ಇನ್ನು 30 ದಿನಗಳೊಳಗೆ ಈ ಆಕ್ಸಿಜನ್ ಘಟಕ ಬಳಕೆಗೆ ಲಭ್ಯವಾಗುವಂತೆ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ. ಆದಷ್ಟು ಶೀಘ್ರ ಇದನ್ನು ಅಳವಡಿಸಲು ಸಂಬಂಧಪಟ್ಟ ಅಧಿಕಾರಿಗಳು ಪ್ರಯತ್ನ ಕೈಗೊಳ್ಳಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ರಾಜ್ಯದ ಗಣಿಗಾರಿಕೆ ಮತ್ತು ಭೂವಿಜ್ಞಾನ ಸಚಿವರು ಕೂಡ ಆಕ್ಸಿಜನ್ ಟ್ಯಾಂಕರ್ ಒಂದನ್ನು ಜಿಲ್ಲೆಗೆ ಒಂದು ವಾರದೊಳಗಾಗಿ ನೀಡುವ ಭರವಸೆ ನೀಡಿದ್ದಾರೆ ಎಂದರು.

ಕೆಎಸ್‌ಎಸ್‌ಡಿಎಲ್ ಅಧ್ಯಕ್ಷರು ಹಾಗೂ ಚನ್ನಗಿರಿ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಅವರು ಮಾತನಾಡಿ, ಕೆಎಸ್‌ಎಸ್‌ಡಿಎಲ್‌ನ ಸಿಎಸ್‌ಆರ್ ನಿಧಿ ವಿನಿಯೋಗಿಸಿ, ಚನ್ನಗಿರಿಯಲ್ಲಿ 13 ಕೆ.ಎಲ್. ಆಕ್ಸಿಜನ್ ಘಟಕ ಮಾಡಲು ನಿರ್ಧರಿಸಿ ಕ್ರಮ ಕೈಗೊಳ್ಳಲಾಗಿದೆ ಎಂದರು.

# ಲಸಿಕೆ ಕೊರತೆಗೆ ಹೈಕೋರ್ಟ್ ತರಾಟೆ

(1ನೇ ಪುಟದಿಂದ) ಇದಕ್ಕೆ ಉತ್ತರ ನೀಡಿದ ಕೇಂದ್ರ ಸರ್ಕಾರದ ಪರ ಅಡಿಷನಲ್ ಸಾಲಿಸಿಟರ್ ಜನರಲ್ ಅಭಿಯೋಜಕರಾದ ಐಶ್ವರ್ಯಾ ಭಾಟಿ ಅವರು, ಎರಡನೇ ಡೋಸ್ ವಿಳಂಬವಾದರೂ ಮೊದಲ ಡೋಸ್ ವ್ಯರ್ಥವಾಗುವುದಿಲ್ಲ. ಕೋವ್ಯಾಕ್ಸಿನ್ ಒಂದನೇ ಲಸಿಕೆ ಪಡೆದವರಿಗೆ ಎರಡನೇ ಡೋಸ್ ಪಡೆಯಲು 6 ವಾರ ಕಾಲಾವಕಾಶವಿದೆ. ಕೊವಿಶೀಲ್ಡ್‌ಗೆ 8 ವಾರಗಳ ಕಾಲಾವಕಾಶವಿದೆ. ಕಾಲಮಿತಿ ಹೆಚ್ಚಿಸುವ ಬಗ್ಗೆ ತಜ್ಞರ ಸಮಿತಿ ಪರಿಶೀಲನೆ ನಡೆಸುತ್ತಿದ್ದು, 2 ದಿನದಲ್ಲಿ ನ್ಯಾಯಾಲಯಕ್ಕೆ ಅಭಿಪ್ರಾಯ ತಿಳಿಸುವುದಾಗಿ ಹೇಳಿದರು.

ಈ ಮೊದಲು ಪೂರೈಸಿದ ಲಸಿಕೆಗಳಲ್ಲಿ ಶೇ.70ರಷ್ಟನ್ನು 2ನೇ ಡೋಸ್ ಪಡೆಯುವವರಿಗೆ ಮೀಸಲಿರಿಸಬೇಕು ಎಂದು ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರಗಳಿಗೆ ಮಾರ್ಗಸೂಚಿಯಲ್ಲಿ ತಿಳಿಸಿತ್ತು. ಅದನ್ನು ಸರಿಯಾಗಿ ಪಾಲನೆಯಾಗಿದ್ದರೆ ಯಾವುದೇ ಗೊಂದಲವಾಗುತ್ತಿರಲಿಲ್ಲ ಎಂದು ಕೇಂದ್ರ ಸರ್ಕಾರದ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತರುವ ಮೂಲಕ ರಾಜ್ಯ ಸರ್ಕಾರದ ಮೇಲೆ ಹೊಣೆಗಾರಿಕೆ ಹೊರಿಸಿದ್ದಾರೆ.

ಇದಕ್ಕೆ ಮತ್ತಷ್ಟು ಸಿಟ್ಟಾದ ನ್ಯಾಯಾಲಯ ಸರ್ಕಾರ ಮಾರ್ಗಸೂಚಿ ಪಾಲನೆ ಮಾಡದೆ ತಪ್ಪು ಮಾಡಿದರೆ, ಜನರೇನು ಮಾಡಬೇಕು? ಜನ ಯಾವ ತಪ್ಪು ಮಾಡಿದ್ದಾರೆ ಎಂದು ಪ್ರಶ್ನಿಸಿದೆ. ನಿಮ್ಮ ಪ್ರಕಾರ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಹೇಳ ಬಯಸುತ್ತೀರಾ? ಎಂದು ನ್ಯಾಯಮೂರ್ತಿಗಳು ಪ್ರಶ್ನಿಸಿದ್ದಾರೆ.

ಇದಕ್ಕೆ ನೇರವಾಗಿ ಉತ್ತರ ನೀಡದ ಕೇಂದ್ರ ಸರ್ಕಾರದ ಪರ ವಕೀಲರು, ಪ್ರಸ್ತುತ ಸಂದರ್ಭದಲ್ಲಿ ಎಲ್ಲರೂ ಕಷ್ಟಕರ ಸ್ಥಿತಿ ಎದುರಿಸುತ್ತಿದ್ದಾರೆ. ನಾವು ರಾಜ್ಯ ಸರ್ಕಾರವನ್ನು ದೂರಲು ಬಯಸುವುದಿಲ್ಲ. ನಾಳೆ ಲಸಿಕೆ ಹಂಚಿಕೆ ನಿಗದಿಯಾಗಿದೆ. ಈ ವೇಳೆ ವ್ಯಾಕ್ಸಿನ್ ಕೊರತೆ ಬಗ್ಗೆಯೂ ಕೇಂದ್ರ ಸರ್ಕಾರ ಗಮನ ಹರಿಸಲಿದೆ. ಈವರೆಗೂ ಕರ್ನಾಟಕ ಸರ್ಕಾರ ಲಸಿಕೆಯ ವಿಚಾರದಲ್ಲಿ ಉತ್ತಮ ಸಾಧನೆ ಮಾಡಿದೆ ಎಂದು ಸಮಜಾಯಿಷಿ ನೀಡಿದ್ದಾರೆ.

ಇನ್ನು ಮುಂದುವರೆದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಕ್ಕೆ ಲಸಿಕೆ ಬಗ್ಗೆ ಮಾರ್ಗಸೂಚಿ ನೀಡಿತ್ತೇ ಎಂದು ಕೇಂದ್ರ ಸರ್ಕಾರದ ವಕೀಲರಿಗೆ ಹೈಕೋರ್ಟ್ ಪ್ರಶ್ನೆ ಮಾಡಿದೆ. ಈ ವರೆಗೆ ಮೂರು ಬಾರಿ ಮಾರ್ಗಸೂಚಿ ನೀಡಲಾಗಿದೆ. ಏಪ್ರಿಲ್ 16 ರಂದೇ ಕೇಂದ್ರ ಸರ್ಕಾರ ಪತ್ರ ಬರೆದಿದೆ ಎಂದು ಕೇಂದ್ರ ಸರ್ಕಾರದ ಪರ ವಕೀಲರು ಸ್ಪಷ್ಟನೆ ನೀಡಿದರು.

ಆಗ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗದುಕೊಂಡ ನ್ಯಾಯಾಲಯ, ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ಉಲ್ಲಂಘನೆ ಮಾಡಿದ್ದೇಕೆ? ಅದನ್ನು ಸರಿಯಾಗಿ ಪಾಲಿಸಿದ್ದರೆ 2ನೇ ಡೋಸ್ ಸಮಸ್ಯೆಯಾಗುತ್ತಿರಲಿಲ್ಲ. ಮೊದಲ ಡೋಸ್ ಪಡೆದವರಿಗೆ ಎರಡನೇ ಡೋಸ್ ಗಾಗಿ ಪೂರೈಕೆಯಾದ ಲಸಿಕೆಯಲ್ಲಿ ಶೇ.70ರಷ್ಟನ್ನು ಏಕೆ ಮೀಸಲಿಡಲಿಲ್ಲ? ಇದು ರಾಜ್ಯ ಸರ್ಕಾರದ ಗಂಭೀರ ಲೋಪವಾಗಿದೆ ಎಂದು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಎರಡು ದಿನಗಳಲ್ಲಿ ಲಸಿಕೆ ಪೂರೈಕೆ ಮಾಡಲು ಕ್ರಮ ಕೈಗೊಳ್ಳಬೇಕು. ಸದ್ಯದ ಪರಿಸ್ಥಿತಿಯಲ್ಲಿ ನಾವು ಸರ್ಕಾರಕ್ಕೆ ನೇರವಾಗಿ ಯಾವುದೇ ಆದೇಶ ನೀಡುವುದಿಲ್ಲ. ಆದರೆ ಎರಡು ದಿನದಲ್ಲಿ ನಿರೀಕ್ಷೆಯಲ್ಲಿ ಇರುವವರಿಗೆ ಲಸಿಕೆ ನೀಡಲು ಕ್ರಮ ಕೈಗೊಳ್ಳಿ ಎಂದು ಸಲಹೆ ನೀಡಿದೆ. ಜೊತೆಗೆ ಜಿಲ್ಲಾವಾರು ಎರಡನೇ ಡೋಸ್ ಲಸಿಕೆ ಪಡೆಯಲು ನಿರೀಕ್ಷೆಯಲ್ಲಿ ಇರುವವರ ಸಮಗ್ರ ಮಾಹಿತಿಯನ್ನು ಸಲ್ಲಿಸುವಂತೆ ಸೂಚನೆ ನೀಡಿದೆ.

# ಭತ್ತ ಖರೀದಿಗೆ ಜೂ. 30 ರವರೆಗೆ ನೋಂದಣಿಗೆ ಅವಕಾಶ ಕಲ್ಪಿಸಲು ಪ್ರಸ್ತಾವನೆ

ದಾವಣಗೆರೆ, ಮೇ 13- ಜಿಲ್ಲೆಯಲ್ಲಿ ಬೆಂಬಲ ಬೆಲೆಯಲ್ಲಿ ಭತ್ತವನ್ನು ಖರೀದಿಸಲು ಹಾಗೂ ರೈತರು ನೋಂದಣಿ ಮಾಡಲು ಜೂನ್ 30 ರವರೆಗೆ ಅವಧಿ ವಿಸ್ತರಿಸುವಂತೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ಕೋವಿಡ್-19 ನಿಯಂತ್ರಣದ ಕುರಿತಂತೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಏರ್ಪಡಿಸಿದ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿದ್ದ ಶಾಸಕ ಎಸ್.ಎ. ರವೀಂದ್ರನಾಥ್ ಅವರು ವಿಷಯ ಪ್ರಸ್ತಾಪಿಸಿ, ಸದ್ಯ ಭತ್ತ ಬೆಳೆ ಕಟಾವಿಗೆ ಬಂದಿದ್ದು, ಕೋವಿಡ್ ಕಾರಣದಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ, ಮಾರುಕಟ್ಟೆಯಲ್ಲಿ ಭತ್ತದ ದರವೂ ಕುಸಿದಿದೆ. ಹೀಗಾಗಿ ರೈತರ ಹಿತಕಾಯಲು ಸರ್ಕಾರ ಸೂಕ್ತ ಕ್ರಮ ವಹಿಸಬೇಕಿದೆ ಎಂದು ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಅವರಿಗೆ ಎಸ್.ಎ. ರವೀಂದ್ರನಾಥ್ ಮನವಿ ಮಾಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಪ್ರತಿಕ್ರಿಯಿಸಿ, ಬೆಂಬಲ ಬೆಲೆಯಲ್ಲಿ ಭತ್ತ ಖರೀದಿಗೆ ರೈತರು ನೋಂದಣಿ ಮಾಡಿಕೊಳ್ಳಲು ಸರ್ಕಾರ ಕಳೆದ ಮೇ 05 ರವರೆಗೆ ಅವಕಾಶ ಕಲ್ಪಿಸಿತ್ತು. ಹೀಗಾಗಿ ಈಗಾಗಲೇ ನೋಂದಣಿ ಮಾಡಿಕೊಂಡಿರುವ ರೈತರ ಭತ್ತವನ್ನು ಮಾತ್ರ ಖರೀದಿಸಲಾಗುತ್ತಿದೆ. ಜಿಲ್ಲೆಯಲ್ಲಿ ಸದ್ಯ ಭತ್ತದ ಬೆಳೆ ಕಟಾವಿಗೆ ಬಂದಿದ್ದು, ಕೋವಿಡ್ ಕಾರಣದಿಂದಾಗಿ ರೈತರಿಗೆ ಸಮಸ್ಯೆಯಾಗಿದೆ, ಮಾರುಕಟ್ಟೆಯಲ್ಲಿ ದರವೂ ಕುಸಿದಿದೆ ಎಂಬ ಅಂಶಗಳೊಂದಿಗೆ, ಬೆಂಬಲ ಬೆಲೆಯಲ್ಲಿ ಭತ್ತ ಖರೀದಿಸಲು ಅನುಕೂಲವಾಗುವಂತೆ ರೈತರು ನೋಂದಣಿ ಮಾಡಿಕೊಳ್ಳುವ ಅವಧಿಯನ್ನು ಜೂ. 30 ರವರೆಗೆ ವಿಸ್ತರಿಸುವಂತೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.


ಸಭೆಯಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹಾಗೂ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ, ಕೆಎಸ್‌ಎಸ್‌ಡಿಎಲ್ ಅಧ್ಯಕ್ಷ ಹಾಗೂ ಚನ್ನಗಿರಿ ಶಾಸಕ ಮಾಡಾಳ್ ವಿರುಪಾಕ್ಷಪ್ಪ, ಮಹಾನಗರಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಮತ್ತಿತರರು ಭಾಗವಹಿಸಿದ್ದರು.

## ನಗರದ ಕಾಯಿಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಸರಳ ಬಸವ ಜಯಂತಿ



ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇಂದು ಸರಳವಾಗಿ ಬಸವ ಜಯಂತಿಯನ್ನು ಆಚರಿಸಲಾಗುತ್ತದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನದ ಸೇವಾ ಸಂಘ ತಿಳಿಸಿದೆ. ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಯನ್ವಯ ಬಸವ ಜಯಂತಿಯನ್ನು ಸರಳವಾಗಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಪದಾಧಿಕಾರಿಗಳು ವಿವರಿಸಿದ್ದಾರೆ.


**ಬಸವ ಜಯಂತಿ ಹಾರ್ದಿಕ ಶುಭಾಶಯಗಳು**



ಸಮಸ್ತ ನಾಗರಿಕರಿಗೆ ಬಸವ ಜಯಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ರಾಜಶೇಖರ್ ಬಿ. ಮಾಕನೂರು
ಶಿವ ರಿಯಲ್ ಎಸ್ಟೇಟ್ ಲಿಂಕ್ಸ್
ಸೈಟು, ಮನೆ ಖರೀದಿಗೆ ಮಾರಾಟಕ್ಕೆ ಸಂಪರ್ಕಿಸಿ.
ಡೋರ್ ನಂ.3038/14, 14ನೇ ಕ್ರಾಸ್
ಆಂಜನೇಯ ಬಡಾವಣೆ, ದಾವಣಗೆರೆ.
ಮೊ: 98863-70445



ಬಸವರಾಜ್ ಆರ್. ಮಾಕನೂರು
ಸಹಾಯಕ ಇಂಜಿನಿಯರ್, ಮೆಸ್ಕಾಂ,
ಮೊ. 88672 92191


ಎಲ್‌ಇಡಿ ಬಳಸಿ, ವಿದ್ಯುತ್ ಉಳಿಸಿ


## ಮೇ 15ಕ್ಕೆ ಮೆಕ್ಕೆಜೋಳ ಹರಾಜು

ದಾವಣಗೆರೆ, ಮೇ 13- ಮಾಯಕೊಂಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಳುವಾಗಿದ್ದ 60 ಕೆಜಿ ತೂಕದ 64 ಚೀಲ ಮೆಕ್ಕೆಜೋಳವನ್ನು ವಶಪಡಿಸಿಕೊಂಡಿದ್ದು, ಇದೇ 15ರಂದು ಮೆಕ್ಕೆಜೋಳವನ್ನು ಸಾರ್ವಜನಿಕ ಹರಾಜು ಹಾಕಲಾಗುತ್ತದೆ.

ಅಂದು ಬೆಳಿಗ್ಗೆ 9ರಿಂದ 10 ಗಂಟೆ ಸುಮಾರಿಗೆ ಮಾಯಕೊಂಡದಲ್ಲಿರುವ ರಾಜ್ಯ ಉಗ್ರಾಣ ನಿಗಮದ ಆವರಣದಲ್ಲಿ ನ್ಯಾಯಾಲಯದ ಆದೇಶದಂತೆ ಎಪಿಎಂಸಿ ವತಿಯಿಂದ ಸಾರ್ವಜನಿಕ ಹರಾಜು ಪ್ರಕ್ರಿಯೆ ನಡೆಸಲಿದ್ದು, ಆಸಕ್ತರು ಹರಾಜಿನಲ್ಲಿ ಭಾಗವಹಿಸುವಂತೆ ಮಾಯಕೊಂಡ ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ನಗರದ ದೊಡ್ಡಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಸರಳ ಬಸವ ಜಯಂತಿ



ದೊಡ್ಡಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ಬಸವ ಜಯಂತಿಯನ್ನು ಇಂದು ಸರಳವಾಗಿ ಆಚರಿಸಲಾಗುವುದು ಎಂದು ಶ್ರೀ ಬಸವೇಶ್ವರ ಸೇವಾ ಸಂಘದ ಅಧ್ಯಕ್ಷರೂ ಆದ ಹಿರಿಯ ಕೈಗಾರಿಕೋದ್ಯಮಿ ಅಥಣಿ ವೀರಣ್ಣ ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ 494 ಸೋಂಕಿತರು ಪತ್ತೆ

ದಾವಣಗೆರೆ, ಮೇ 13 – ಜಿಲ್ಲೆಯಲ್ಲಿ ಗುರುವಾರ 494 ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ. ಇದೇ ದಿನ 753 ಸೋಂಕಿತರು ಗುಣಮುಖರಾಗಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಈಗ 2,984 ಆಗಿದೆ.


ದಾವಣಗೆರೆ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ 341 ಸೋಂಕಿತರು ಕಂಡು ಬಂದಿದ್ದಾರೆ. ಹರಿಹರದಲ್ಲಿ 48, ಜಗಳೂರಿನಲ್ಲಿ 3, ಚನ್ನಗಿರಿಯಲ್ಲಿ 52, ಹೊನ್ನಾಳಿಯಲ್ಲಿ 32 ಹಾಗೂ ಹೊರ ಜಿಲ್ಲೆಗಳ 18 ಸೋಂಕಿತರು ಕಂಡುಬಂದಿದ್ದಾರೆ.

## ಬಸವ ಜಯಂತಿ, ರಂಜಾನ್ : ಶುಭಾಶಯ

ಸಮಾನತೆಯ ಹರಿಕಾರ ಜಗಜ್ಯೋತಿ ಬಸವಣ್ಣನವರ ಜಯಂತಿ ಮತ್ತು ಪವಿತ್ರ ರಂಜಾನ್ ಹಬ್ಬಗಳ ಶುಭ ಸಂದರ್ಭದಲ್ಲಿ ಸಮಸ್ತ ಸಾರ್ವಜನಿಕರಿಗೆ ಶುಭವಾಗಲಿ ಎಂದು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಲೋಕಸಭಾ ಸದಸ್ಯ ಡಾ. ಜಿ.ಎಂ.ಸಿದ್ದೇಶ್ವರ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಹಾರೈಸಿದ್ದಾರೆ.







# ಇಎಸ್‌ಐಯಲ್ಲಿ ಗುಣಮುಖ ಆಗುತ್ತಿರುವವರಿಗೆ ಚಿಕಿತ್ಸೆ

ದಾವಣಗೆರೆ, ಮೇ 13- ಕೊರೊನಾ ಸೋಂಕು ತಡೆಗಟ್ಟಲು ನಗರದ 80 ಬೆಡ್ ವ್ಯವಸ್ಥೆಯುಳ್ಳ ಇಎಸ್‌ಐ ಆಸ್ಪತ್ರೆಯನ್ನು ಡಿಟಿಹೆಚ್‌ಸಿ (ಡೆಡಿಕೇಟೆಡ್ ಕೋವಿಡ್ ಹೆಲ್ತ್ ಕೇರ್ ಸೆಂಟರ್) ಕೇಂದ್ರವನ್ನಾಗಿ ಮಾಡಲಾಗಿದ್ದು, ಆಸ್ಪತ್ರೆಯಲ್ಲಿ ಮಿನಿಮಲ್ ಆಕ್ಸಿಜನ್ ಪೂರೈಕೆಯನ್ನು ಮಾಡಲಾಗುತ್ತದೆಯೇ ವಿನಃ ಕೋವಿಡ್ ಸೋಂಕಿತರಿಗೆ ಸಂಪೂರ್ಣ ಚಿಕಿತ್ಸೆ ನೀಡಲಾಗುವುದಿಲ್ಲ. ದಾವಣಗೆರೆ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಕೋವಿಡ್ ಸೋಂಕಿತರಿಗೆ ಮೊದಲು ಚಿಕಿತ್ಸೆ ನೀಡಿ 4-5 ದಿನಗಳಲ್ಲಿ ಗುಣಮುಖರಾಗುವವರನ್ನು ಇಎಸ್‌ಐ ಆಸ್ಪತ್ರೆಗಳಿಗೆ ಕಳಿಸಲಾಗುತ್ತಿದೆ. ಈ ಕಾರಣದಿಂದ ಕೋವಿಡ್-19 ಸೋಂಕಿಗೆ ತುತ್ತಾದವರು ಇಎಸ್‌ಐ ಆಸ್ಪತ್ರೆಗೆ ನೇರವಾಗಿ ಹೋಗದೆ ಚಿಗಟೇರಿ ಜಿಲ್ಲಾಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯಬೇಕು ಎಂದು ಜಿಲ್ಲಾಡಳಿತ ತಿಳಿಸಿದೆ.


VIGNAAN ACDEMY TRUST (R)

VIGNAAN CAREER INSTITUTE

VIGILANT TO MAKE VIBRANT VETERANS

" VIGNAAN SCHOLARSHIP ADMISSION TEST (VSAT)"

SCHOLARSHIP WORTH 20 LAKHS

- Top 1 to 10 Students Upto Rs 1,00,000/-
- Top 11 to 20 Student Upto Rs 50,000/-
- Many More

SO HURRY UP TO GRAB THIS GREAT OPPORTUNITY !!!

online Test - May 2021

Dates: 16th, 19th, 23rd, 26th and 30th

Note: Registration is mandatory befor Taking test

For Registration

Send your Name, Parent Name, Contact No., School Name, board (State/CBSE/ICSE), Residential Address To whatsapp : 70192 71181 or 99456 87347

Test Details:

- Test is based on 10th Science, Maths Syllabus & Few Mental ability Questions.
- 100 Questions (Phy-25, Che-25, Math-25, Bio-25) 100 Marks in 100 Minutes
- 0.25 for Every Wrong Answer

Success Strategy

Personalized & Adapative Teaching (PAT)
Subject Matter Expert (SME)
Complete Personality Development (CPD)

only 3 Exclusive Batches for 1st PUC (PCMB/PCMCs)
Integrated PC Science for Medical NEET (UG)
Integrated PUC Science for IIT/NIT, JEE (Main & Advanced)
Integrated PUC Science for Farm Sciences/ Engg KCET

For Registration & Admission Contact

# 4279/1, 18th Cross, Vishwabandhu Building, Anjaneya Badavane, Davanagere.

Mobile : 8618998978, 7019474462

Email: info@vignaanacademy.org website: www.vignaanacademy.org



ಭಾವಪೂರ್ಣ ಶ್ರದ್ಧಾಂಜಲಿ



ಸಂತ ಪೌಲರ ಕಾನ್ವೆಂಟ್ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿಯಾದ

ಪೂಜ್ಯ ಸಿಸ್ಟರ್ ಸುಜಯ (ಪುಷ್ಪ ಗ್ಲೋರಿಯಾ ಅಂಜಲಿ)

ಅವರು ದಿನಾಂಕ 29.04.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಯಮಯ ದೇವರು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುವ.

ದುಃಖತಪ್ತ: ಸಂತ ಪೌಲರ ಕಾನ್ವೆಂಟ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು.





ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 13.5.2021ರಂದು ಅಕಾಲಿಕವಾಗಿ ನಿಧನರಾದ ದಾವಣಗೆರೆ ಎಪಿಎಂಸಿಯ ಹೆಸರಾಂತ ಶೇಂಗಾ ವರ್ತಕರಾದ

ಶ್ರೀ ಎ. ಕಾಸಲ್ ವೆಂಕಟೇಶ್

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

✦ ಶ್ರೀಮತಿ ಅನ್ನಪೂರ್ಣ ಮತ್ತು ಎ.ಎಸ್. ಮಹೇಶ್ವರಯ್ಯ ಮಳಲ್ಕೆರೆ ಹಾಗೂ ಮಕ್ಕಳು
✦ ಕೆ.ಜಿ.ಕೆ. ರಾಜಣ್ಣ ಅಂಡ್ ಕೋ., ವರ್ತಕರು
✦ ಎಸ್.ಟಿ. ಕುಸುಮ ಶ್ರೇಷ್ಠಿ, ವರ್ತಕರು, ✦ ಶ್ರೀ ರಾಮಾಂಜನೇಯ ಟ್ರೇಡರ್ಸ್
✦ ಹಂಜಗಿಮಠದ ಚರಲಿಂಗಯ್ಯ ಅಂಡ್ ಕೋ., ವರ್ತಕರು
✦ ಕರೇಶಿವಪ್ಪರ ಸಿದ್ದೇಶ್, ವರ್ತಕರು, ದಾವಣಗೆರೆ



ಪುಣ್ಯಸ್ಮರಣೆ



ಜನನ: 07-01-1951

ಲಿಂಗೈಕ್ಯ : 14-05-2020

ದಿ. ಶ್ರೀಮತಿ ಎ.ಸಿ.ಶ್ಯಾಮಲ

ಅಮ್ಮ ನೀವಿಲ್ಲದೆ ಇಂದಿಗೆ ಒಂದು ವರ್ಷ. ಸದಾಸ್ಮರಣೆಯಲ್ಲಿರುವ......

ನಿಮ್ಮ ಕುಟುಂಬ.



ಸರ್ವರಿಗೂ ಬಸವ ಜಯಂತಿ ಹಾಗೂ ಪವಿತ್ರ ರಂಜಾನ್ ಹಬ್ಬದ ಹಾರ್ದಿಕ ಶುಭಾಶಯಗಳು





ಬಸವ ಜಯಂತಿ ಹಾಗೂ ರಂಜಾನ್ ಹಬ್ಬವು ಸರ್ವರಿಗೂ ಸುಖ-ಶಾಂತಿ ನೆಮ್ಮದಿ ತರಲಿ ಎಂದು ಶುಭ ಕೋರುವ.

ಆವರಗೆರೆ ಜಿ. ಸುರೇಶ್

ಮಾಜಿ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮಹಾನಗರ ಪಾಲಿಕೆ, ದಾವಣಗೆರೆ.

ಮಾಜಿ ಅಧ್ಯಕ್ಷರು, ಟಿಎಪಿಸಿಎಂಎಸ್, ದಾವಣಗೆರೆ.

(ಪ್ರತಿಯೊಬ್ಬರು ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿ)





ಬಿಂದಪ್ಪ ಮಲ್ಲಿಕಾರ್ಜುನ್

ಭಾವಪೂರ್ಣ ಶ್ರದ್ಧಾಂಜಲಿ

ನಮ್ಮೆಲ್ಲರ ಆತ್ಮೀಯ ಸ್ನೇಹಿತರಾದ

ಶ್ರೀ ಎಸ್.ಟಿ. ಜ್ಯೋತಿಪ್ರಕಾಶ್

ಮತ್ತು

ಶ್ರೀ ಬಿಂದಪ್ಪ ಮಲ್ಲಿಕಾರ್ಜುನ್

ಅವರುಗಳ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿತ್ತಾ,ಮೃತರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಅವರ ಕುಟುಂಬ ವರ್ಗಕ್ಕೆ ಭಗವಂತನು ದುಃಖ ಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುವ..



ಎಸ್.ಟಿ. ಜ್ಯೋತಿಪ್ರಕಾಶ್

✦ ಯಶವಂತರಾವ್ ಜಾಧವ್ ✦ ಎಂ. ದೊಡ್ಡಪ್ಪ ✦ ಗೌತಮ್ ಕುಮಾರ್ ✦ ಎಂ. ಪರಪ್ಪ
✦ ಕೆ.ಎಂ.ಪ್ರಭುಸ್ವಾಮಿ ✦ ಕಿತ್ತೂರು ಜಯಣ್ಣ ✦ ಹುಕುಂ ಚಂದ್ ✦ ಕೆ.ಎಂ. ಸತೀಶ್ ಬಾಬು





ಚಿರಸ್ಮರಣೆ

ಉಸಿರು ಹೋದರೂ ಹೆಸರು ಉಳಿಸಿದ

ಲಿಂ. ಶ್ರೀಮತಿ ಶಾಮನೂರು ಪಾರ್ವತಮ್ಮ

(ಲಿಂ|| ಶ್ರೀ ಶಾಮನೂರು ಕಲ್ಲೇಶಪ್ಪನವರ ಧರ್ಮಪತ್ನಿ)

ನಿಧನ : 14.5.2019

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.

ಸದಾ ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಅಂತಃಕರಣ, ನಿಮ್ಮ ಶ್ರಮ, ಸಾತ್ವಿಕ ಜೀವನ ಮತ್ತು ಜೀವನೋತ್ಸಾಹ ನಮ್ಮೆಲ್ಲರ ಬದುಕಿನ ದಾರಿ ದೀಪ, ನಿಮ್ಮ ನೆನಪೇ ನಮ್ಮ ಉಸಿರು, ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ, ಸದಾ ನಿಮ್ಮ ಸ್ಮರಣೆಯಲ್ಲಿರುವ.

✦ ಡಾ|| ಟಿ.ಜಿ. ರವಿಕುಮಾರ್ (ಆರೈಕೆ ಹಾಸ್ಪಿಟಲ್ಸ್)
✦ ಶ್ರೀಮತಿ ಮೇಘನಾ ಮತ್ತು ಪವಿತ್ರ ಎಸ್.ಕೆ. ನಿರ್ದೇಶಕರು, ಎಪಿಎಂಸಿ, ದಾವಣಗೆರೆ.
✦ ಶ್ರೀಮತಿ ಶ್ವೇತ ಮತ್ತು ಪ್ರದೀಪ್ ಎಸ್.ಕೆ.
✦ ಗೌರಿ, ಸಮನ್ಯು, ಚಿರಂತನ್, ಅಭ್ಜಿನ್

ಶಾಮನೂರು ವಂಶಸ್ಥರು, ಬಂಧು-ಮಿತ್ರರು



ಸ್ವರಾಜ್ ಟ್ರ್ಯಾಕ್ಟರ್ಸ್




27ನೇ ವರ್ಷದ ಈ ಶುಭ ಸಂದರ್ಭದಲ್ಲಿ

ನಮಗೆ ಸಹಕರಿಸಿದಂತಹ ಎಲ್ಲಾ ರೈತ ಬಾಂಧವರಿಗೂ, ಗ್ರಾಹಕರಿಗೂ, ಹಿತೈಷಿಗಳಿಗೂ ಹಾಗೂ ಮಹೀಂದ್ರಾ ಅಂಡ್ ಮಹೀಂದ್ರಾ ಲಿ., ಸ್ವರಾಜ್ ಡಿವಿಜನ್ ಮತ್ತು ಎಲ್ಲಾ ಬ್ಯಾಂಕ್ ಸಿಬ್ಬಂದಿ ವರ್ಗದವರಿಗೂ 'ಬಸವ ಜಯಂತಿ' ಹಬ್ಬದ ಹಾರ್ದಿಕ ಶುಭಾಶಯಗಳು....



ವೀರಮಾಚನೇನಿ ರಾಘವೇಂದ್ರ ಪ್ರಸಾದ್

ಮಾಲೀಕರು




ಶ್ರೀ ರಾಘವೇಂದ್ರ ಆಟೋಮೊಬೈಲ್ಸ್

ಅಧಿಕೃತ ಮಾರಾಟಗಾರರು : ದಾವಣಗೆರೆ, ಜಗಳೂರು ತಾಲ್ಲೂಕುಗಳಿಗೆ

'ಸ್ವರಾಜ್' ಟ್ರ್ಯಾಕ್ಟರ್ಸ್ ಸೇಲ್ಸ್, ಸರ್ವೀಸ್ ಮತ್ತು ಬಿಡಿ ಭಾಗಗಳು

ಜಿ.ಎಂ. ಕಾಂಪೌಂಡ್, ಪಿ.ಬಿ. ರಸ್ತೆ, ದಾವಣಗೆರೆ - 577 002. ಫೋನ್ : (08192)253552, 233420

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9164735744, 9448275344, 9972590878

ಬ್ರಾಂಚ್ ಆಫೀಸ್

ಜಗಳೂರು : ಪಿ.ಎಲ್.ಡಿ. ಬ್ಯಾಂಕ್ ರಸ್ತೆ, ಫೋ. : 91647 35744, 702276312

ಶೇಖರ್, ದಾವಣಗೆರೆ, ಫೋ. : 70222 76323, 98455 47215

ಹೇಮಂತ್, ಫೋ. : 7022276314, 77600 40407

ಮಂಜುನಾಥ್, ಜಗಳೂರು, 7022276317, 91648 38363


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte